"ಸ್ಥಳ ತಪಾಸಣೆ ನಡೆಸಿದ 5 ತಂಡದವರಿಂದ ಸಲ್ಲಿಸಲ್ಪಟ್ಟ ಪ್ರತ್ಯೇಕ ತನಿಖಾ ವರದಿಯಲ್ಲಿ ಎಲ್ಲಿಯೂ ಸಹ ಆರೋಪಿಗಳಿಂದ ಕಳಪೆ ಕಾಮಗಾರಿ ನಡೆದಿದೆ ಎಂದಾಗಲಿ, ಸರ್ಕಾರದ ಹಣ ದುರುಪಯೋಗ ಮಾಡಲ್ಪಟ್ಟಿದೆ ಎಂದಾಗಲಿ ನಮೂದಿಸಲ್ಪಟ್ಟಿಲ್ಲ. ಸದರಿ ತಂಡದ ಸದಸ್ಯರೇ ವಿಚಾರಣೆಯಲ್ಲಿ ಶಿಸ್ತು ಪ್ರಾಧಿಕಾರ ಪರ ಸಾಕ್ಷ್ಯ ನುಡಿದಾಗಲೂ ಸಹ ಈ ಅಂಶಗಳನ್ನು ಹೇಳಿಲ್ಲ ವಿಚಾರಣಾಧಿಕಾರಿಗಳು ತಾವೇ ಸ್ವತಃ ನಿರ್ಣಯ ನೀಡಿದ್ದಾರೆ. ತಮ್ಮ ಜೊತೆಯಲ್ಲಿ ಹುಲ್ಲಹಳ್ಳಿ ನಾಲಾ ಕಾಮಗಾರಿಯ 40 ರಿಂದ 50 ಕಿ.ಮೀ. ವರೆಗಿನ ಆರೋಪಿತ ಅಕ್ರಮದಲ್ಲಿ ಆರೋಪಿಯಾಗಿದ್ದ ಎಸ್. ರವಿಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರ ವಿರುದ್ಧ ವಿಚಾರಣೆ ಹೂಡಿ ಅವರ ಉತ್ತರವನ್ನು ಒಪ್ಪಿಕೊಂಡು ಕಳಪೆ ಕಾಮಗಾರಿ ನಡೆದಿಲ್ಲವೆಂಬ ನಿಲುವು ತಳೆದು ಅವರನ್ನು ಆರೋಪ ಮುಕ್ತರನ್ನಾಗಿಸಿದೆ. ಹೀಗಾಗಿ ತಮ್ಮಗಳ ವಿರುದ್ಧ ವಿಚಾರಣೆ ನಡೆಸಿರುವುದು ನ್ಯಾಯ ಸಮ್ಮತವಲ್ಲ. ಹಾಗೆಯೇ ಕಾಲುವೆಯ 34 ಮತ್ತು 35ನೇ ಕಿ.ಮೀ. ವರೆಗಿನ ಕಾಮಗಾರಿಯು ತುರ್ತಾಗಿದ್ದ ಕಾರಣ ಸರ್ಕಾರದ ದಿನಾಂಕ 6-6-2002ರ ಪತ್ರದಲ್ಲಿ ನೀಡಿದ ಆದೇಶದಂತೆ ಲೋಕೋಪಯೋಗಿ ಸಂಹಿತೆಯ ಕಂಡಿಕೆ 182 (2)ರನ್ವಯ ನೇರವಾಗಿ ಕಾಮಗಾರಿಗೆ ವಹಿಸಲಾಯಿತೆಂದು ತಿಳಿಸಿ ತಮ್ಮನ್ನು ಆರೋಪ ಮುಕ್ತರನ್ನಾಗಿಸುವಂತೆ ಕೋರಿದ್ದಾರೆ".

ನಿವೃತ್ತ ಮುಖ್ಯ ಇಂಜಿನಿಯರ್‌ಗಳ ಉತ್ತರಗಳನ್ನು ವಿಚಾರಣಾ ವರದಿ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ವರದಿಯಲ್ಲಿ ಕಾಮಗಾರಿಗಳಲ್ಲಿ ಕಡಿಮೆ ಗಾತ್ರದ ಕಲ್ಲುಗಳು ಬೆಡ್ಡಿಂಗ್ ಮಾಡಲ್ಪಟ್ಟು, ಟೆಂಪ್ಲೇಟುಗಳು ಸರಿದಿದ್ದು ಬೆಡ್ಡಿಂಗ್ ರಿಸೆಟ್ಟಿಂಗ್ ಮಾಡುವ ಅವಶ್ಯಕತೆ ಇರುವುದು ಮೂಡಿಬಂದಿದೆ. ಇದಲ್ಲದೆ, ತನಿಖಾ ವರದಿಗಳಲ್ಲಿ ಕಂಡುಬಂದಿರುವ ಲೋಪದೋಷಗಳನ್ನು ನಿವಾರಿಸಲು ಆರೋಪಿತ ಅಧಿಕಾರಿಗಳು ತಮ್ಮ ತಪಾಸಣೆ/ಪರಿವೀಕ್ಷಣೆ ಸಂದರ್ಭಗಳಲ್ಲಿ ಯಾವುದೇ ಕ್ರಮವಹಿಸದೇ ಇರುವುದು ಕಂಡುಬಂದಿದೆ ಮತ್ತು ತಮ್ಮ ಅಧೀನದಲ್ಲಿ ಕೆಲಸ ಮಾಡುವ ಯಾವುದೇ ಅಭಿಯಂತರರಿಗೆ ಈ ಬಗ್ಗೆ ಸಲಹೆ/ಸೂಚನೆ ನೀಡಿರುವುದೂ ಕಂಡುಬಂದಿರುವುದಿಲ್ಲ. ಆದ್ದರಿಂದ ಆರೋಪಿತರು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿರುವುದು ಕಂಡುಬರುತ್ತದೆ. ಲೋಕೋಪಯೋಗಿ ಸಂಹಿತೆಯ ಕಂಡಿಕೆ 182(2)ನ್ನು ಉಲ್ಲಂಘಿಸಿದ ಆರೋಪ ಕುರಿತು ಹೇಳುವುದಾದರೆ 1ನೇ ಆರೋಪಿಯು ದಿನಾಂಕ : 4-5-2002 ರ ಪತ್ರವನ್ನು ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿಯವರಿಗೆ ಬರೆದು ಗುತ್ತಿಗೆದಾರರಾದ ಆರ್. ಗಣೇಶ್ ಅವರು ನಮೂದಿಸಿರುವ ದರವು ಟೆಂಡರ್ ದರಕ್ಕಿಂತ ಶೇಕಡಾ 27.419 ರಷ್ಟು ಹೆಚ್ಚಿಗೆ ಇದ್ದು ಇದಕ್ಕೆ ಅನುಮೋದನೆ ಕೋರಿದ್ದಾರೆ. ಇದಕ್ಕೆ ಸರ್ಕಾರದಿಂದ ನೀಡಲ್ಪಟ್ಟ ದಿನಾಂಕ : 6-6-2002 ರ ಉತ್ತರದಲ್ಲಿ ಶೇಕಡಾ 14ರ ಹೆಚ್ಚಳಕ್ಕೆ ಸೀಮಿತಗೊಳಿಸಲು ತಿಳಿಸಲಾಗಿದೆ. ಇದರ ತರುವಾಯ ಮೊದಲನೇ ಆರೋಪಿಯು ದಿನಾಂಕ : 28-6-2002ರ ಪತ್ರ ಬರೆದು ನಾಲೆಯ 34ನೇ ಕಿ.ಮೀ.ನಲ್ಲಿ ಲೈನಿಂಗ್ ಕಾಮಗಾರಿಯನ್ನು ನೇರ ಗುತ್ತಿಗೆ ವಹಿಸುವ ಕೆಲಸ ತುರ್ತು ಕಾಮಗಾರಿ ಆಗಿದ್ದ ಕಾರಣ ಅದನ್ನು ಕೈಗೊಳ್ಳಲಾಯಿತೆಂದು ತಿಳಿಸಿ, ಸದರಿ ಕ್ರಮಕ್ಕೆ ಅನುಸಮರ್ಥನೆ ನೀಡಲು ಕೋರಿದ್ದಾರೆ. ಇದನ್ನು ಪರಿಶೀಲಿಸಲಾಗಿ ಸರ್ಕಾರದ ಅನುಮೋದನೆ ಪಡೆಯದೇ ನೇರ ಗುತ್ತಿಗೆಗೆ ವಹಿಸಿರುವುದು ಮೂಡಿಬಂದಿದೆ. ಆದ್ದರಿಂದ ವಿಚಾರಣಾಧಿಕಾರಿಗಳ ನಿರ್ಣಯವನ್ನು ಸರ್ಕಾರವು ಒಪ್ಪಿಕೊಂಡು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯೊಡನೆ ದಂಡನೆ ವಿಧಿಸಲು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 133 ಎಸ್‌ಇಎಸ್ 2004, ಬೆಂಗಳೂರು, ದಿನಾಂಕ : 26-10-2010

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 214ನೇ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು " ಶ್ರೀ ಹೆಚ್. ಚಂದ್ರಶೇಖರಯ್ಯ ಮತ್ತು ಶ್ರೀ ಎಸ್. ಕೃಷ್ಣಶೆಟ್ಟಿ, ನಿವೃತ್ತ ಮುಖ್ಯ ಇಂಜಿಯರ್‌ಗಳು ಇವರುಗಳ ಮಾಸಿಕ ನಿವೃತ್ತಿ ವೇತನದಿಂದ ಶೇಕಡಾ 20 ರಷ್ಟು ಮೊತ್ತವನ್ನು 5 ವರ್ಷಗಳ ಅವಧಿಯವರೆಗೆ ಕಡಿತಗೊಳಿಸುವ ದಂಡನೆ". ವಿಧಿಸಲು ಈ ಮೂಲಕ ಆದೇಶಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 2779

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಬಿ.ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಪರಿಷ್ಕೃತ ಮಂಜೂರಾತಿ ಆದೇಶ ನೀಡುವ ಬಗ್ಗೆ.

ಓದಲಾಗಿದೆ :
1. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ (ಜಿ)/ಎಲ್–73/ಸಿಆರ್–14/2008/ಬಿಜಿಕೆಟಿ, ದಿನಾಂಕ : 29–6–2010.
2. ತನಿಖಾಧಿಕಾರಿಯವರ ವರದಿ ದಿನಾಂಕ : 20–5–2010.
3. ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.
4. ಸರ್ಕಾರಿ ಆದೇಶ ಸಂಖ್ಯೆ : ಆಇ 34 ವಾತೆತ 2010, ದಿನಾಂಕ : 25–8–2010.
5. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಎಲ್–73/ಸಿಆರ್–14/2008/ಬಿಜಿಕೆಟಿ, ದಿನಾಂಕ : 14–9–2010.

ಪ್ರಸ್ತಾವನೆ :

ಶ್ರೀ ಬಿ.ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ಗುನ್ನೆ ಸಂಖ್ಯೆ : 14/2008 ರಲ್ಲಿ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಬಾಗಲಕೋಟೆ, ಇಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (1)ರ ಪತ್ರ ದಿನಾಂಕ : 29–6–2010 ರೊಡನೆ ಕಳುಹಿಸುತ್ತಾ, ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988 ರ ಕಲಂ 19(1)(ಬಿ) ರಡಿಯಲ್ಲಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ದಿನಾಂಕ : 29–6–2010ರ ಪತ್ರದೊಡನೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

1. ಶ್ರೀ ಸುಬ್ರಮಣಿಯನ್, ತಂದೆ ಸುಂದರಂ, ಕೆ.ಎಮ್.ಎಮ್.ಐ. ಇಸ್ಪಾತ ಪ್ರೈವೇಟ್ ಲಿಮಿಟೆಡ್ ಪ್ರಾಜಕ್ಟ್ ಇನ್‌ಚಾರ್ಜ್ ಹಾಲವರ್ತಿ, ತಾ/ಜಿ ಕೊಪ್ಪಳ ಹಾಗೂ ಶ್ರೀ ಕೆ.ಮಣಿ, ಪ್ರಾಜಕ್ಟ್ ಇಂಜಿನಿಯರ್ ಇವರ ದೂರು ದಿನಾಂಕ : 10–12–2008.
2. ಪ್ರಥಮ ವರ್ತಮಾನ ವರದಿ : ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಬಾಗಲಕೋಟೆ ಪ್ರಕರಣದ ಸಂಖ್ಯೆ: 14/2008.
3. ಪ್ರಾಯೋಗಿಕ ಪಂಚನಾಮೆ ದಿನಾಂಕ : 11–12–2008.
4. ಟ್ರ್ಯಾಪ್‌ನ ಮಹಜರ್ ದಿನಾಂಕ : 11–12–2008.
5. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ : ಪಿಹೆಚ್‌ಐ/ಸಿಎಂಇ/ಲೋಕ್–144/2008–09, ದಿನಾಂಕ : 16–12–2008.
6. ಕೃತ್ಯ ನಡೆದ ಸ್ಥಳದ ನಕಾಶೆ :
7. ಸಾಕ್ಷಿ ಹೇಳಿಕೆಗಳ ಪಟ್ಟಿ :
   1. ಶ್ರೀ ಸುಬ್ರಮಣಿಯನ್, ತಂದೆ ಸುಂದರಂ, ಕೆ.ಎಮ್.ಎಮ್.ಐ. ಇಸ್ಪಾತ ಪ್ರೈವೇಟ್ ಲಿಮಿಟೆಡ್ ಪ್ರಾಜಕ್ಟ್ ಹಾಲವರ್ತಿ, ತಾ/ಜಿ, ಕೊಪ್ಪಳ–ಫಿರ್ಯಾದಿ
   2. ಶ್ರೀ ಸಂಗಮೇಶ ಭೀಮಶಿ ಮುಂಡರಗಿ ಪ್ರ.ದ.ಸ. ಸಬ್‌ರಿಜಿಸ್ಟ್ರಾರ್ ಆಫೀಸ್, ಬಾಗಲಕೋಟೆ.
   3. ಶ್ರೀ ಶಂಕರ ತಂದೆ ವಿಶ್ವನಾಥ ಮಠದ, ದ್ವಿ.ದ.ಸ. ತಹಶೀಲ್ದಾರರ ಕಾರ್ಯಾಲಯ, ಬಾಗಲಕೋಟೆ.
   4. ಶ್ರೀ ಶಬ್ಬೀರ ಹುಸೇನಿ ತಂದೆ ಸೈಯದ ಮೆಹಮೂದ ಹುಸೇನಿ ಸಾ: ಕೊಪ್ಪಳ ತಗ್ಗಿನಕೇರಿ.
   5. ಶ್ರೀ ಕೆ. ಮಣಿ, ಇಂಜಿನಿಯರ್, ಕೆ.ಎಮ್.ಎಮ್.ಐ, ಇಸ್ಪಾತ ಪ್ರೈವೇಟ್ ಲಿಮಿಟೆಡ್.
   6. ಶ್ರೀ ಶಿವಪಾಲ ಅನುರಾಗಿ ತಂದೆ ಪ್ರೇಮಕುಮಾರ ಅನುರಾಗಿ, ಲಾರಿ ನಂ. ಸಿಜೆ–04/ಡಿಎ:2645ರ ಚಾಲಕ.
   7. ಶ್ರೀ ಚಂದ್ರಶೇಖರ ಚಂಗಪ್ಪ ದಳವಾಯಿ, ವಾಣಿಜ್ಯ ತೆರಿಗೆ ಅಧಿಕಾರಿಗಳು ಧೂಳಖೇಡ ಚೆಕ್ ಪೋಸ್ಟ್.
   8. ಶ್ರೀ ರಾಮಸ್ವಾಮಿ ಪಡೆಯಪ್ಪ ಸೌದತ್ತಿ, ವಾಣಿಜ್ಯ ತೆರಿಗೆ ಪರಿವೀಕ್ಷಕರು, ಧೂಳಖೇಡ ಚೆಕ್ ಪೋಸ್ಟ್
   9. ಶ್ರೀ ಈರಪ್ಪ ಗುಂಡಪ್ಪ ಮೆಡ್ಲಿ, ದ್ವಿ.ದ.ಸ. ಧೂಳಖೇಡ ಚೆಕ್ ಪೋಸ್ಟ್.
   10. ಶ್ರೀ ಅರ್ಜುನ ಆನಂದಪ್ಪ ಕೌಟೇಕರ ಸಿಪಾಯಿ, ಧೂಳಖೇಡ ಚೆಕ್ ಪೋಸ್ಟ್.
   11. ಶ್ರೀ ಸಂಗಪ್ಪ ರಾಮಣ್ಣ ಪೂಜಾರಿ, ವಾಣಿಜ್ಯ ತೆರಿಗೆ ಅಧಿಕಾರಿ, ಧೂಳಖೇಡ ಚೆಕ್ ಪೋಸ್ಟ್
   12. ಶ್ರೀ ಮುಕುಂದ ದಾಮೋದರ ನಾಯಿಕ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ಉತ್ತರ ವಲಯ, ಬೆಳಗಾಂವ.
   13. ಶ್ರೀ ಜಗದೀಶ ಶಿವಾಜಿ ನಾರಾಯಣಕರ ಎ.ಇ., ಪಿ.ಡಬ್ಲ್ಯೂಡಿ, ಇಂಡಿ.
   14. ಶ್ರೀ ಆರ್. ಎಮ್. ಚವಲಕರ, ದಲಾಯತ್, ಕೆ.ಎಲ್.ಎ., ಬಾಗಲಕೋಟೆ.
   15. ಶ್ರೀ ಐ.ಎಂ.ದುಂಡಿಸಿ, ಪಿ.ಸಿ. ಕೆ.ಎಲ್.ಎ., ಬಾಗಲಕೋಟೆ.
   16. ಶ್ರೀ ಆರ್.ಎಸ್. ಹೂಗಾರ ಪಿ.ಸಿ. ಕೆ.ಎಲ್.ಎ. ಬಾಗಲಕೋಟೆ.
   17. ಶ್ರೀ ಎಸ್.ಐ. ಬಿಳೇಕುದುರಿ, ಪಿ.ಸಿ. ಕೆ.ಎಲ್.ಎ. ಬಾಗಲಕೋಟೆ.
   18. ಶ್ರೀಮತಿ ಎಸ್.ಎಸ್. ಕೋರ್ತಿ, ಮಹಿಳಾ ಪೇದೆ, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ.
   19. ಶ್ರೀ ಎಸ್.ಪಿ. ಇನಾಮದಾರ ಪಿ.ಸಿ. ಕೆ.ಎಲ್.ಎ. ಬಾಗಲಕೋಟೆ.
   20. ಶ್ರೀ ಕೆ.ವಿ. ಕುಲಕರ್ಣಿ, ಎಚ್.ಸಿ. ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ.

ಈ ಪ್ರಕರಣದಲ್ಲಿ ಫಿರ್ಯಾದಿಯು ತಮ್ಮ ಕೆ.ಎಮ್.ಎಮ್.ಐ. ಇಸ್ಪಾತ ಪ್ರೈವೇಟ್ ಲಿಮಿಟೆಡ್ ಮೆಷಿನುಗಳನ್ನು ಛತ್ತೀಸ್‌ಗಡ ರಾಜ್ಯದ ರಾಯಪುರದಲ್ಲಿ ಖರೀದಿಸಿ ಲಾರಿ ನಂ. ಸಿಜಿ 04 ಡಿಎ 2645 ರಲ್ಲಿ ಲೋಡ್ ಮಾಡಿಸಿ ಕೊಪ್ಪಳದ ಕಡೆಗೆ ತರುವಾಗ, ಇದರಲ್ಲಿ ಆಪಾದಿತ ಅಧಿಕಾರಿಗಳು ಲಾರಿಯನ್ನು ಧೂಳಖೇಡ ಚೆಕ್‌ಪೋಸ್ಟ್‌ನಲ್ಲಿ ನಿಲ್ಲಿಸಿ, ಲಾರಿಯಲ್ಲಿನ ಮಷಿನರಿ ಚೆಕ್ ಮಾಡಿ, ಲಾರಿ ಬಿಡಲು ಫಿರ್ಯಾದಿಗೆ 5.00 ಲಕ್ಷ ರೂ.ಗಳ ಲಂಚ ಕೇಳಿ ಪಡೆದುಕೊಂಡ ಅಪರಾಧವಾಗಿರುತ್ತದೆ.

ತನಿಖಾಧಿಕಾರಿಯವರಾದ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ, ಇವರು ಈ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಸಲ್ಲಿಸಿರುವ ಅಂತಿಮ ತನಿಖಾ ವರದಿಯ ಪರಿಶೀಲನೆಯಿಂದ ಆಪಾದಿತ ಅಧಿಕಾರಿಯಾದ ಶ್ರೀ ಬಿ.ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಇವರ

ವಿರುದ್ಧ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2) ರಡಿಯಲ್ಲಿ ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದ್ದರಿಂದ ಸದರಿ ಆಪಾದಿತ ಅಧಿಕಾರಿಯವರು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಲು ಅರ್ಹರಾಗಿರುತ್ತಾರೆ. ಆದುದರಿಂದ ಸರ್ಕಾರದ ಪೂರ್ವಾನುಮತಿ ಅಗತ್ಯವಾಗಿರುತ್ತದೆ ಎಂದು ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರು ಕೋರಿರುತ್ತಾರೆ.

ಆದುದರಿಂದ ಆಪಾದಿತ ಅಧಿಕಾರಿಯನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ 13(2) ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ. ಈ ಪತ್ರದೊಂದಿಗೆ ತನಿಖಾ ವರದಿಯ ನೆರಳಚ್ಚು ಪ್ರತಿ ಪ್ರಥಮ ವರ್ತಮಾನ ವರದಿಯ ಪ್ರತಿ ಟ್ರ್ಯಾಪ್ ಪೂರ್ವದ ಮಹಜರ್, ಟ್ರ್ಯಾಪ್‌ನ ನಡವಳಿಗಳು, ರಾಸಾಯನಿಕ ತಜ್ಞರ ವರದಿ, ವಶಪಡಿಸಿಕೊಂಡ ದಾಖಲೆಗಳ ಪ್ರತಿ, ಕೃತ್ಯನಡೆದ ಸ್ಥಳದ ನಕ್ಷೆ, ದಾಖಲೆಗಳ ಪ್ರತಿಗಳು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಕಳುಹಿಸಿರುತ್ತಾರೆ.

ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ ರಾಸಾಯನಿಕ ಪರೀಕ್ಷಕರ ವರದಿ, ಕೃತ್ಯ ನಡೆದ ಸ್ಥಳದ ನಕ್ಷೆ, ಆರೋಪಿತರ ಸೇವಾ ವಿವರಗಳು, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿದೆ. ಇದರಿಂದಾಗಿ ಶ್ರೀ ಬಿ.ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ಮೇಲಿನ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬರುತ್ತದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಆಪಾದಿತ ಅಧಿಕಾರಿಯಾದ ಶ್ರೀ ಬಿ.ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿಯನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7 ಮತ್ತು 13(1) (ಡಿ) ಜೊತೆಗೆ 13(2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಅದರಂತೆ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (4)ರ ಸರ್ಕಾರಿ ಆದೇಶದಲ್ಲಿ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (5)ರ ಅಪರ ಪೊಲೀಸ್ ಮಹಾನಿರ್ದೇಶಕರ ಪತ್ರ ದಿನಾಂಕ : 14-9-2010 ರಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಆಇ 34 ವಾತೆತ 2010 ದಿನಾಂಕ : 25-8-2010 ರಲ್ಲಿ ಕೆಲವೊಂದು ನ್ಯೂನತೆಗಳು ಕಂಡುಬಂದಿದ್ದು, ಅದನ್ನು ಸರಿಪಡಿಸಿ ಪರಿಷ್ಕೃತ ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡುವಂತೆ ಕೋರಿರುತ್ತಾರೆ.

ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 34 ವಾತೆತ 2010, ಬೆಂಗಳೂರು, ದಿನಾಂಕ : 4-10-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಆರ್. ಚಂದ್ರಶೇಖರಾರಾಧ್ಯ, ಪೀಠಾಧಿಕಾರಿ, ಆರ್ಥಿಕ ಇಲಾಖೆ, ವಾಣಿಜ್ಯ ತೆರಿಗೆ-2 ಶಾಖೆ ಆದ ನಾನು ಆಪಾದಿತ ಅಧಿಕಾರಿಯಾದ ಶ್ರೀ ಬಿ.ಎಂ. ಪದ್ಮನಾಭ, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1) (ಡಿ) ಜೊತೆಯಲ್ಲಿ ಓದಲಾದ ಕಲಂ 13(2) ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಅನುಮತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 18ರ ಪ್ರಕಾರ, ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ : 4-10-2010 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಆರ್. ಚಂದ್ರಶೇಖರಾರಾಧ್ಯ
ಪೀಠಾಧಿಕಾರಿ,
ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ-2)

ಪಿ. ಆರ್. 2780

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಸ್.ಪಿ. ಕುಲಕರ್ಣಿ, ಕೆಎಎಸ್ (ಹಿ.ಶ್ರೇ) ಅಧಿಕಾರಿ ಇವರ ವಿರುದ್ಧ ಇಲಾಖಾ ವಿಚಾರಣೆ ಆರೋಪಮುಕ್ತರನ್ನಾಗಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : (1) ನೋಟೀಸ್ ಸಂಖ್ಯೆ: ಸಿಆಸುಇ 319 ಕೆಇವಿ 07, ದಿ: 20.02.09.

(2) ಶ್ರೀ ಬಿ. ಸಿದ್ದಯ್ಯ, ಕೆಎಎಸ್ (ಹಿ.ಶ್ರೇ) ಅಧಿಕಾರಿ ರವರು ನೋಟೀಸಿಗೆ ನೀಡಿರುವ ಉತ್ತರ ದಿ. 19.03.09, 31.03.09, 20.04.09, 30.06.09 ಮತ್ತು 13.07.09.

ಪ್ರಸ್ತಾವನೆ :

ಶ್ರೀ ಎಸ್.ಪಿ. ಕುಲಕರ್ಣಿ, ಕೆಎಎಸ್ (ಹಿ.ಶ್ರೇ) ಅಧಿಕಾರಿ ರವರು ಈ ಹಿಂದೆ ಚಿಕ್ಕಬಳ್ಳಾಪುರ ಉಪ ವಿಭಾಗಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕು ಸುದ್ದಹಳ್ಳಿ ಗ್ರಾಮದ ಸರ್ವೆ ನಂ. 68 ರಲ್ಲಿ 9-16 ಎಕರೆ ಜಮೀನಿನ ಗಣಿಗಾರಿಕೆ ರದ್ದುಪಡಿಸುವ ವಿಚಾರದಲ್ಲಿ ಶ್ರೀ ಸಿ.ಎಸ್ ಚಂದ್ರಕಾಂತ್ ಎನ್ನುವವರು ಸರ್ಕಾರವು ಹೊರಡಿಸಿದ್ದ ಅಧಿಸೂಚನೆ ದಿನಾಂಕ: 27.06.1991ರ ಆದೇಶಕ್ಕೆ ಅಪೀಲು ಸಲ್ಲಿಸಿದ್ದಾಗ, ಅಧಿಕಾರವಿಲ್ಲದಿದ್ದರೂ ದಿನಾಂಕ: 12/08/2007 ರಂದು ತಡೆಯಾಜ್ಞೆಯನ್ನು ನೀಡಿ ಮಧ್ಯಂತರ ಆದೇಶ ಹೊರಡಿಸುವ ಮೂಲಕ ಕರ್ತವ್ಯಲೋಪ ಎಸಗಿರುವ ಕುರಿತು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ನೋಟೀಸಿನೊಂದಿಗೆ ದೋಷಾರೋಪಣೆಗಳನ್ನು ಜಾರಿ ಮಾಡುವುದರ ಮೂಲಕ ಇವರ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಲಾಯಿತು. ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರಗಳಲ್ಲಿ ಆಪಾದಿತ ಅಧಿಕಾರಿಗಳು ನೋಟೀಸಿಗೆ ಉತ್ತರ ಸಲ್ಲಿಸಿ ಈ ಕೆಳಕಂಡ ಕಾರಣಗಳಿಂದಾಗಿ ತಮ್ಮನ್ನು ಆರೋಪಗಳಿಂದ ಕೈಬಿಡುವಂತೆ ಕೋರಿದ್ದಾರೆ.

1. ಮೀಸಲು ಅರಣ್ಯವೆಂದು ಹೊರಡಿಸಲಾಗಿರುವ ದಿನಾಂಕ: 27.06.91ರ ಅಧಿಸೂಚನೆ ಸಂಖ್ಯೆ: AFFF 194 FAF 91 ಅಧಿಕೃತವಾಗಿ ಹೊರಡಿಸಿಯೇ ಇರುವುದಿಲ್ಲ. ಇದರ ಕರಡು ಪ್ರತಿ ಮಾತ್ರ ಲಭ್ಯವಿದ್ದು, ಇದು ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡಿರುವುದಿಲ್ಲ.
2. ಸದರಿ ಜಮೀನು 50 ವರ್ಷಗಳಿಂದ ಇಲ್ಲಿಯವರೆಗೂ ಹುಲ್ಲುಬನ್ನಿ (ಗೋಮಾಳ) ಎಂದು RTC ದಾಖಲೆಗಳಲ್ಲಿ ನಮೂದಾಗಿರುತ್ತದೆ.
3. ಇದು ಗೋಮಾಳವಾಗಿರುವ ಕಾರಣದಿಂದಾಗಿಯೇ ಸರ್ಕಾರವು ಇದನ್ನು ಲ್ಯಾಂಡ್ ಬ್ಯಾಂಕಿನಿಂದ (ಅರಣ್ಯ ಇಲಾಖೆಯಿಂದ) ಹಿಂದಕ್ಕೆ ಪಡೆದು 200.00 ಎಕರೆ ಜಮೀನನ್ನು Visveswaraya Technological University ಬೆಳಗಾಂ ಇವರಿಗೆ ಮಂಜೂರು ಮಾಡಿರುತ್ತದೆ.
4. ದಿನಾಂಕ: 20.07.94ರ ಕಂದಾಯ ಇಲಾಖೆಯ ಆದೇಶದಂತೆ, ಲ್ಯಾಂಡ್ ಬ್ಯಾಂಕಿಗಾಗಿ ವರ್ಗಾವಣೆಗೊಂಡ ಜಮೀನುಗಳನ್ನು ಮೀಸಲು ಅರಣ್ಯವೆಂದು ಅಧಿಸೂಚನೆ ಹೊರಡಿಸಲು ನಿರ್ಬಂಧವಿರುತ್ತದೆ.

5. ಸದರಿ ಶ್ರೀ ಚಂದ್ರಕಾಂತ್‌ರವರಿಗೆ ಗಣಿ ಗುತ್ತಿಗೆ ಮಂಜೂರಾಗುವ ಮೊದಲು, ಇವರು ಕೋರಿರುವ ಪ್ರದೇಶವು ಅರಣ್ಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು, ಕಲ್ಲುಬಂಡೆಗಳಿಂದ ಕೂಡಿದ ಗೋಮಾಳ ಪ್ರದೇಶವೆಂದು ಸಂಬಂಧಿಸಿದ ಅರಣ್ಯ ಇಲಾಖೆಯ ಅಧಿಕಾರಿಯ ವರದಿಯ ಆಧಾರದ ಮೇಲೆ ಗಣಿ ಗುತ್ತಿಗೆ ಮಂಜೂರಾಗಿರುತ್ತದೆ.
6. ಕರ್ನಾಟಕ ಭೂ ಕಂದಾಯ ಕಾಯ್ದೆಯಡಿ ಮೇಲ್ಮನವಿಯನ್ನು ವಿಚಾರಣೆಗೆ ಒಳಪಡಿಸಲು ಉಪ ವಿಭಾಗಾಧಿಕಾರಿಗಳಿಗೆ ಅಧಿಕಾರವಿರುತ್ತದೆ.
7. ಅರಣ್ಯ ಇಲಾಖೆಯ ದೌರ್ಜನ್ಯದ ವಿರುದ್ಧ ಸುಮಾರು 200 ಜನರು ಉಪ ವಿಭಾಗಾಧಿಕಾರಿಗಳ ಕಛೇರಿಯ ಮುಂದೆ ಧರಣಿ ನಡೆಸಿದ್ದು, ಕಾನೂನು ಭಂಗ ಆಗುವ ಸಾಧ್ಯತೆ ಇದ್ದುದರಿಂದ ಸದ್ಯಕ್ಕೆ ಪರಿಸ್ಥಿತಿಯನ್ನು ನಿಭಾಯಿಸಲು ಅನ್ಯ ಮಾರ್ಗವಿಲ್ಲದೆ ಬಹಿರಂಗ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಿ ಪರಿಸ್ಥಿತಿಯನ್ನು ಶಾಂತಗೊಳಿಸಬೇಕಾಯಿತು. ಶ್ರೀ ಚಂದ್ರಕಾಂತ್ ರವರು ತಮ್ಮ ಹಕ್ಕು ದಾಖಲಾತಿಗಳನ್ನು ಸ್ಥಾಪಿಸಲು ಸಲ್ಲಿಸಲಾದ ದಾಖಲಾತಿಗಳನ್ನು ಪರಿಶೀಲಿಸಿದ ನಂತರವೇ ತಡೆಯಾಜ್ಞೆಯನ್ನು ನೀಡಲಾಗಿದ್ದು, ನಂತರ ಅರಣ್ಯ ಇಲಾಖೆಯ ಲಿಖಿತ ಉತ್ತರವನ್ನು ಪರಿಶೀಲಿಸಿ ತಡೆಯಾಜ್ಞೆಯನ್ನು ತೆರವುಗೊಳಿಸಲಾಯಿತು.
8. ನನ್ನ ತಡೆಯಾಜ್ಞೆಯ ಆದೇಶದಲ್ಲಿ ಯಾವುದೇ ದುರ್ನಡತೆ ಇರುವುದಿಲ್ಲ. ಶ್ರೀ ಚಂದ್ರಕಾಂತ್‌ರವರಿಗೆ ಗಣಿ ಗುತ್ತಿಗೆ ಪರವಾನಗಿ ದೊರಕಿದ್ದರೂ ಸಹ ಸದರಿ ಜಮೀನಿನಲ್ಲಿ ಯಾವುದೇ ಗಣಿಗಾರಿಕೆ ಈವರೆಗೂ ನಡೆದಿರುವುದಿಲ್ಲ. ಸರ್ಕಾರಕ್ಕೆ ಯಾವುದೇ ನಷ್ಟ ಆಗಿರುವುದಿಲ್ಲ.

ಶ್ರೀ ಎಸ್.ಪಿ. ಕುಲಕರ್ಣಿ, ಕೆಎಎಸ್ (ಹಿ.ಶ್ರೇ) ಅಧಿಕಾರಿಯವರು ಸಲ್ಲಿಸಿರುವ ವಿವರಣೆಯನ್ನು ಪರಿಶೀಲಿಸಿದಾಗ ಸರ್ವೆ ನಂ. 68 ಮೀಸಲು ಅರಣ್ಯ ಕ್ಷೇತ್ರಕ್ಕೆ ಸೇರಿದ ಜಮೀನು ಆಗಿರುವುದಿಲ್ಲ. ಈ ಸಂಬಂಧ ಸರ್ಕಾರವು ಅಧಿಸೂಚನೆಯನ್ನು ಅನುಮೋದಿಸಿದ್ದರು ಇದು ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗಿರುವುದಿಲ್ಲ.ಇದಲ್ಲದೆ ಸದರಿಯವರ ಉತ್ತರದಲ್ಲಿ ಸರ್ವೆ ನಂ. 60ರ ಪೈಕಿ 200 ಎಕರೆಯಷ್ಟು ಜಮೀನನ್ನು ಸರ್ಕಾರವು Visveswaraya Technological University ಬೆಳಗಾಂ ಇವರಿಗೆ ಮಂಜೂರು ಮಾಡಿದ್ದು, ಇದರ ಸಂಬಂಧ ಆರ.ಟಿ.ಸಿ. ನಕಲು, ಆಕಾರ್‌ಬಂದ್‌ನ ನಕಲನ್ನು ಕೂಡ ಹಾಜರ್‌ಪಡಿಸಿರುತ್ತಾರೆ. ಇದರ ಪ್ರಕಾರ ಸರ್ವೆ ನಂ. 68 ರಿಂದ 200 ಎಕರೆ ಜಮೀನನ್ನು ಬೇರ್ಪಡಿಸಿ ಅದಕ್ಕೆ ಹೊಸ ನಂಬರ್ 95 ಎಂದು ಕೊಟ್ಟಿದ್ದು, ಇದನ್ನು Visveswaraya Technological University ಬೆಳಗಾಂ ಇವರಿಗೆ ಹಂಚಿಕೆ ಮಾಡಿ ಉಳಿದ ಭಾಗವನ್ನು ಹುಲ್ಲುಗಾವಲು ಎಂದು ಮುಂದುವರೆಸಲಾಗಿದೆ. ಕಂದಾಯ ಇಲಾಖೆಯು ಹೊರಡಿಸಿರುವ ಆದೇಶದಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಒತ್ತುವರಿಯಿಂದ ಮುಕ್ತವಾದ "ಸಿ" ಮತ್ತು "ಡಿ" ವರ್ಗದ ಜಮೀನುಗಳಾಗಿ ಮುಂದುವರೆಸಬೇಕಾಗಿದ್ದು, ಇವುಗಳನ್ನು ಅರಣ್ಯ ಕಾಯ್ದೆಯಡಿ ಕಾಯ್ದಿರಿಸಿದ ಅರಣ್ಯ ಎಂಬುದಾಗಿ ಯಾವುದೇ ಅಧಿಸೂಚನೆಯನ್ನು ಹೊರಡಿಸಬಾರದು ಎಂಬ ಷರತ್ತು ಇರುತ್ತದೆ. ಈ ಅಧಿಸೂಚನೆಯಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಸುದ್ದಪಳ್ಳಿ ಗ್ರಾಮದ ಸರ್ವೆ ನಂ. 68 ಕೂಡ ಸೇರಿರುತ್ತದೆ.

ಮೇಲ್ಕಂಡಂತೆ 1991ರ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟವಾಗದ ಕಾರಣ ಹಾಗೂ ಪ್ರಶ್ನಿತ ಜಮೀನು "ಸಿ" ಮತ್ತು "ಡಿ" ಜಮೀನಾಗಿ ಮುಂದುವರೆದಿರುವುದರಿಂದ ಹಾಗೂ ಶ್ರೀ ಎಸ್.ಪಿ. ಕುಲಕರ್ಣಿ ಇವರು ಅರಣ್ಯ ಇಲಾಖೆಯ ಪ್ರಸ್ತಾವನೆಯನ್ನು ಪರಿಗಣಿಸಿ ತಾವು ಹೊರಡಿಸಿದ ಮಧ್ಯಂತರ ಆದೇಶವನ್ನು ಹಿಂದಕ್ಕೆ ಪಡೆದಿರುವುದರಿಂದ ಇವರ ಈ ಕೃತ್ಯದಿಂದಾಗಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಆಗಿಲ್ಲದ ಕಾರಣ ಇವರ ಸಮಜಾಯಿಷಿಯನ್ನು ಒಪ್ಪಿ ಇವರನ್ನು ಆರೋಪಗಳಿಂದ ಮುಕ್ತರನ್ನಾಗಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 319 ಕೆಇವಿ 2007, ಬೆಂಗಳೂರು, ದಿನಾಂಕ 25-10-2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಶ್ರೀ ಎಸ್.ಪಿ. ಕುಲಕರ್ಣಿ, ಕೆಎಎಸ್ (ಹಿ.ಶ್ರೇ) ಅಧಿಕಾರಿರವರನ್ನು ದಿ: 20.02.2009ರ ನೋಟೀಸಿನಲ್ಲಿ ಮಾಡಲಾದ ಆರೋಪಗಳಿಂದ ಆರೋಪಮುಕ್ತರನ್ನಾಗಿಸುತ್ತದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಅವರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2764

ಎಂ. ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವೆಗಳು-2)

ಇಂಧನ ಸಚಿವಾಲಯ

ವಿಷಯ : ಮೆ॥ ಮನಾಲಿ ಶುಗರ್ಸ್ ಲಿಮಿಟೆಡ್ ಇವರ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು 15 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 382 ಎನ್‌ಸಿಇ 2008 ದಿನಾಂಕ: 26.06.2009.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 105 ಎನ್‌ಸಿಇ 2010 ದಿನಾಂಕ: 23.03.2010
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಪತ್ರದ ಸಂಖ್ಯೆ : ಕೆಆರ್‌ಇಡಿ/04/ಎಂಎಸ್‌ಎಲ್/10/2508 ದಿನಾಂಕ 19.08.2010 / 02.09.2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಮನಾಲಿ ಶುಗರ್ಸ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಮಲಘಾನ ಗ್ರಾಮದಲ್ಲಿ 6.00 MW (Gross) ಮತ್ತು 3.5 MW (exportable) ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಕೆಲವೊಂದು ಷರತ್ತಿಗೊಳಪಟ್ಟು ನಿರಾಕ್ಷೇಪಣೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಮನಾಲಿ ಶುಗರ್ಸ್ ಲಿಮಿಟೆಡ್ ಇವರ 6.00 MW ಸಾಮರ್ಥ್ಯದ ಸಹ ವಿದ್ಯುತ್ ಉತ್ಪಾದನಾ ಘಟಕವನ್ನು 10.00 ಮೆಗಾ ವ್ಯಾಟ್‌ಗೆ ಹೆಚ್ಚಿಸಿ ವಿದ್ಯುತ್ ಉತ್ಪಾದನೆ ಮಾಡಲು ನಿರಾಕ್ಷೇಪಣೆಯನ್ನು ನೀಡಲಾಗಿತ್ತು.

ಮೆ॥ ಮನಾಲಿ ಶುಗರ್ಸ್ ಲಿಮಿಟೆಡ್ ಇವರು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರಿಗೆ ದಿನಾಂಕ: 16.08.2010ರಂದು ಮನವಿಯನ್ನು ನೀಡಿ ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 10.00 ಮೆಗಾ ವ್ಯಾಟ್‌ನಿಂದ 15.00 ಮೆಗಾ ವ್ಯಾಟ್‌ಗೆ ಹೆಚ್ಚಿಸಲು ನಿರಾಕ್ಷೇಪಣ ಪತ್ರವನ್ನು ನೀಡಬೇಕೆಂದು ಕೋರಿರುತ್ತಾರೆ. ಅಭಿವೃದ್ಧಿದಾರರು ಈ ಮೊದಲು ನೀಡಿದ 10 ಮೆಗಾ ವ್ಯಾಟ್ ಸಾಮರ್ಥ್ಯಕ್ಕನುಗುಣವಾಗಿ ಟಿ.ಜಿ. ಸೆಟ್‌ನ್ನು ಅಳವಡಿಸಿದ್ದರು. ಇದು ಆರ್ಥಿಕವಾಗಿ unviable ಆಗಿದ್ದು, ಆರ್ಥಿಕ ಸಂಸ್ಥೆ ಮತ್ತು ಐ.ಆರ್.ಇ.ಡಿ.ಎ.ಯಿಂದ ಆರ್ಥಿಕ ಸಹಾಯ ಪಡೆಯಲು ಕಷ್ಟವಾಗುತ್ತಿರುವುದರಿಂದ ಹಾಗೂ ಈ ಘಟಕದ ಸಾಮರ್ಥ್ಯವನ್ನು ಹೆಚ್ಚಿಸಿದಲ್ಲಿ ಲಾಭಾಂಶವು ಹೆಚ್ಚಾಗುವುದರಿಂದ ಸಾಮರ್ಥ್ಯದ ಹೆಚ್ಚಳಕ್ಕಾಗಿ ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 402 ಎನ್‌ಸಿಇ 2010, ಬೆಂಗಳೂರು, ದಿನಾಂಕ: 28-10-2010.

ಮೆ॥ ಮನಾಲಿ ಶುಗರ್ಸ್ ಲಿಮಿಟೆಡ್ ಇವರ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಮಲಘಾನ ಗ್ರಾಮದಲ್ಲಿ ಇರುವ 10.00 ಮೆಗಾ ವ್ಯಾಟ್ ಾಮರ್ಥ್ಯದ ಸಹ ವಿದ್ಯುತ್ ಉತ್ಪಾದನಾ ಘಟಕವನ್ನು 15.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ವಿದ್ಯುತ್ ಉತ್ಪಾದನೆ ಮಾಡಲು ನಿರಾಕ್ಷೇಪಣೆಯನ್ನು ೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿನ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

ಪಿ.ಆರ್ 2765

ಇಂಧನ ಸಚಿವಾಲಯ

ವಿಷಯ : ಮೆ॥ ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್ ಇವರಿಗೆ 30.00 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವ ಬಗ್ಗೆ.

ಓದಲಾಗಿದೆ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/04/ಎಸ್‌ಆರ್‌ಎಸ್‌ಎಲ್-ರಾಯಭಾಗ/10/2391 ದಿನಾಂಕ 04/05.08.2010.

ಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಮೆ॥ ೀ ರೇಣುಕಾ ಶುಗರ್ಸ್ ಲಿಮಿಟೆಡ್ ಇವರಿಗೆ ಬೆಳಗಾಂ ಜಿಲ್ಲೆಯ ರಾಯಭಾಗ ತಾಲ್ಲೂಕಿನ ರಾಯಭಾಗದಲ್ಲಿ 30.00 MW (Gross) ಮತ್ತು 25.00 MW exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಲುಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 366 ಎನ್‌ಸಿಇ 2010, ಬೆಂಗಳೂರು, ದಿನಾಂಕ: 28-10-2010.

ಮೆ॥ ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್ ಇವರಿಗೆ ಬೆಳಗಾಂ ಜಿಲ್ಲೆಯ ರಾಯಭಾಗ ತಾಲ್ಲೂಕಿನ ರಾಯಭಾಗದಲ್ಲಿ 30.00 MW (Gross) ಮತ್ತು 5.00 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಈ ಕೆಳಗಿನ ನಿಬಂಧನೆಗೊಳಪಟ್ಟು ಸರ್ಕಾರದ ನಿರಾಕ್ಷೇಪಣೆಯನ್ನು ೀಡಲಾಗಿದೆ:-

1. The Company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka Power Transmission Corporation Limited in case of selling power to third party and power purchase agreement in case of selling power in Karnataka Power Transmission Corporation Limited.
3. The company shall obtain necessary statutory clearance wherever required from the respective Departments/Organizations such as Forest Department. Revenue Department, & Karnataka State Pollution Control Board, etc. for both the Sugar Mill and the Power plant.
4. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

ಪಿ.ಆರ್ 2766

ಇಂಧನ ಸಚಿವಾಲಯ

ವಿಷಯ : ಮೆ॥ ಜಿ.ಎಂ. ಶುಗರ್ ಅಂಡ್ ಎನರ್ಜಿ ಲಿಮಿಟೆಡ್ ಇವರಿಗೆ 18.00 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವ ಬಗ್ಗೆ.

ಓದಲಾಗಿದೆ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/04/ಜಿಎಂಎಸ್/ಇಪಿಎಲ್ /10/2391 ದಿನಾಂಕ 09/10.08.2010.

ಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಮೆ॥ .ಎಂ. ಶುಗರ್ ಅಂಡ್ ಎನರ್ಜಿ ಲಿಮಿಟೆಡ್ ಇವರಿಗೆ ಹಾವೇರಿ ಜಿಲ್ಲೆ ಮತ್ತು ತಾಲ್ಲೂಕು, ಸಂಗೂರ್ ಎಂಬಲ್ಲಿ 18.00 MW (Gross) ಮತ್ತು 14.00 MW xportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 367 ಎನ್‌ಸಿಇ 2010, ಬೆಂಗಳೂರು, ದಿನಾಂಕ: 28-10-2010.

ಮೆ॥ ಜಿ.ಎಂ. ಶುಗರ್ ಅಂಡ್ ಎನರ್ಜಿ ಲಿಮಿಟೆಡ್ ಇವರಿಗೆ ಹಾವೇರಿ ಜಿಲ್ಲೆ ಮತ್ತು ತಾಲ್ಲೂಕು, ಸಂಗೂರ್ ಎಂಬಲ್ಲಿ 18.00 MW (Gross) ಮತ್ತು 14.00 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಈ ಕೆಳಗಿನ ನಿಬಂಧನೆಗೊಳಪಟ್ಟು ಸರ್ಕಾರದ ನಿರಾಕ್ಷೇಪಣೆಯನ್ನು ನೀಡಲಾಗಿದೆ:–

1. The Company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka Power Transmission Corporation Limited in case of selling power to third party and power purchase agreement in case of selling power in Karnataka Power Transmission Corporation Limited.
3. The company shall obtain necessary statutory clearance wherever required from the respective Departments/Organizations such as Forest Department. Revenue Department, & Karnataka State Pollution Control Board, etc. for both the Sugar Mill and the Power plant.
4. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ.

ಪಿ.ಆರ್ 2767

ಕಂದಾಯ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಸಜೀಪಮೂಡ ಗ್ರಾಮ ಪಣೋಳಿಬೈಲು ಶ್ರೀ ಕಲ್ಲುರ್ಟಿ ದೈವಸ್ಥಾನವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಪ್ರಕಟಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪತ್ರ ಸಂಖ್ಯೆ: ಎಡಿಎಂ 5 ಸಿಆರ್ 34/2010–11 ದಿನಾಂಕ: 09–11–2010

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪತ್ರ ದಿನಾಂಕ: 09–11–2010ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಸಜೀಪಮೂಡ ಗ್ರಾಮದ ಪಣೋಳಿಬೈಲು, ಶ್ರೀ ಕಲ್ಲುರ್ಟಿ ದೈವಸ್ಥಾನವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದ ರಿಟ್ ಅರ್ಜಿ ಸಂಖ್ಯೆ:10022/2005ನ್ನು ದಿನಾಂಕ: 03–02–2009ರಂದು ಇತ್ಯರ್ಥಪಡಿಸಿದ್ದು, ಅದರಲ್ಲಿ ಹಿಂದಿನ ರದ್ದಾದ ಮದ್ರಾಸ್ ಹೆಚ್.ಆರ್. ಮತ್ತು ಸಿ.ಇ. ಕಾಯ್ದೆ 1951ರ ಸೆಕ್ಷನ್ 61ರಲ್ಲಿ ಅವಕಾಶವಿರುವಂತೆ ಜಿಲ್ಲಾಧಿಕಾರಿಗಳ ಆದೇಶದ ವಿರುದ್ಧ ರಿಟ್ ಅರ್ಜಿಯನ್ನು ಸಲ್ಲಿಸಲು ರಿಟ್ ಅರ್ಜಿದಾರರಿಗೆ ಸೂಚಿಸಲಾಗಿತ್ತೆಂದೂ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ರಿಟ್ ಅರ್ಜಿದಾರರು ಧಾರ್ಮಿಕ ದತ್ತಿ ಆಯುಕ್ತರಲ್ಲಿ ಸೆಕ್ಷನ್ 61 ರಂತೆ ಅಪೀಲು ಸಲ್ಲಿಸಿರುತ್ತಾರೆ. ಸದರಿ ಅಪೀಲನ್ನು ದಿನಾಂಕ 23–10–2010 ರಂದು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಆದೇಶ ಸಂಖ್ಯೆ ಎಡಿಎಂ 7 ಎಪಿ 31/2008–09ರಲ್ಲಿ ವಜಾಗೊಳಿಸಿ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆರವರ ದಿನಾಂಕ 21–02–2005ರ ಆದೇಶವನ್ನು ಸ್ಥಿರೀಕರಿಸಲಾಗಿದೆ.

ಅದರಂತೆ ಪಣೋಳಿಬೈಲು, ಶ್ರೀ ಕಲ್ಲುರ್ಟಿ ದೈವಸ್ಥಾನವು ಹಿಂದಿನ ಮದ್ರಾಸ್ ಹಿಂದೂ ಧಾರ್ಮಿಕ ಮತ್ತು ದತ್ತಿಗಳ ಕಾಯ್ದೆ 1951ರನ್ವಯ ಸಾರ್ವಜನಿಕ ಸಂಸ್ಥೆಯೆಂದು ತೀರ್ಮಾನವಾಗಿರುತ್ತದೆ. ಸದರಿ ದೈವಸ್ಥಾನವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997ರ ಸೆಕ್ಷನ್ 23 ರನ್ವಯ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಪ್ರಕಟಿಸುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರು ಕೋರಿಕೆ ಸಲ್ಲಿಸಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 106 ಮುಆಬಿ 2010, ಬೆಂಗಳೂರು, ದಿನಾಂಕ: 24ನೇ ಡಿಸೆಂಬರ್ 2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಸಜೀಪಮೂಡ ಗ್ರಾಮ, ಪಣೋಳಿಬೈಲು ಶ್ರೀ ಕಲ್ಲುರ್ಟಿ ದೈವಸ್ಥಾನವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 23 ರನ್ವಯ ಅಧಿಸೂಚಿತ ಸಂಸ್ಥೆಗಳ ಪಟ್ಟಯಲ್ಲಿ ಸೇರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ಶ್ರೀಕಂಠಬಾಬು

ಪೀಠಾಧಿಕಾರಿ

ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್.157

KA/ BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜನವರಿ ೨೦, ೨೦೧೧ (ಪುಷ್ಯ ೩೦, ಶಕ ವರ್ಷ ೧೯೩೨)	ಸಂಚಿಕೆ ೩

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಕರ್ನಾಟಕ ವಿಧಾನಸಭೆ ಸಚಿವಾಲಯ

ಅಧಿಸೂಚನೆ

ಕ್ರಮ ಸಂಖ್ಯೆ/ಕವಿಸಸ/ಆ–1/33/ಎಫ್‌ಪಿಪಿ/97, ಬೆಂಗಳೂರು, ದಿನಾಂಕ: 23ನೇ ಡಿಸೆಂಬರ್, 2010

ವಿಷಯ : ಕರ್ನಾಟಕ ವಿಧಾನಸಭೆ ಸಚಿವಾಲಯದ ಉಪ ಕಾರ್ಯದರ್ಶಿ(ಸಂ.ವ್ಯ.ವಿ.) ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6(ii)ರ ಪ್ರಕಾರ ಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ಚಿವಾಲಯದಲ್ಲಿ ಅಧೀನ ಕಾರ್ಯದರ್ಶಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್.ಗುಣಶೇಖರನ್, ಇವರಿಗೆ ತಕ್ಷಣದಿಂದ ಜಾರಿಗೆ ರುವಂತೆ ವೇತನ ಶ್ರೇಣಿ ರೂ. 20025–525–22650–600–26250–675–28275ರಲ್ಲಿ ಉಪಕಾರ್ಯದರ್ಶಿ (ಸಂಸದೀಯ ವ್ಯವಹಾರಗಳ ಾಗ) ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ,
ಕೆ. ನೂರ್ ಮಹಮದ್,
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಆರ್. 02

ಅಧಿಸೂಚನೆ

ಕ್ರಮ ಸಂಖ್ಯೆ/ಕವಿಸಸ/ಆ–1/89/ಎಫ್‌ಪಿಪಿ/96–03, ಬೆಂಗಳೂರು, ದಿನಾಂಕ: 23ನೇ ಡಿಸೆಂಬರ್, 2010

ವಿಷಯ: ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧೀನ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6(ii)ರ ಪ್ರಕಾರ ಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ವಾಲಯದಲ್ಲಿ ಶಾಖಾಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ಅಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ .14050–350–14400–400–16800–450–19500–525–22650–600–25050ರಲ್ಲಿ ಅಧೀನ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ಡಲಾಗಿದೆ.

1. ಶ್ರೀಮತಿ ಬಿ.ಆರ್.ವಸಂತಕುಮಾರಿ, ಶಾಖಾಧಿಕಾರಿ
2. ಶ್ರೀ ಎಂ.ಎಸ್.ಪರಶಿವಮೂರ್ತಿ, ಶಾಖಾಧಿಕಾರಿ

ಸಭಾಧ್ಯಕ್ಷರ ಆದೇಶಾನುಸಾರ,
ಕೆ. ನೂರ್ ಮಹಮದ್,
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಆರ್. 03

ಅಧಿಸೂಚನೆ

ಕ್ರಮ ಸಂಖ್ಯೆ/ಕವಿಸಸ/ಆ-1/131/ಎಫ್‌ಪಿಪಿ/2005, ಬೆಂಗಳೂರು, ದಿನಾಂಕ: 23ನೇ ಡಿಸೆಂಬರ್, 2010

ವಿಷಯ: ಕರ್ನಾಟಕ ವಿಧಾನಸಭೆ ಸಚಿವಾಲಯದ ಅಭಿಲೇಖನಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6(ii) ರ ಪ್ರಕಾರ ಹಾಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ಸಚಿವಾಲಯದಲ್ಲಿ ವರದಿಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಸ್.ಎಂ.ಕೊಟ್ರೇಶ್. ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ.11400-300-12300-350-14400-400-16800-450-19500-525-21600ರಲ್ಲಿ ಅಭಿಲೇಖನಾಧಿಕಾರಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ,
ಕೆ. ನೂರ್ ಮಹಮದ್,
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಪಿ.ಆರ್. 04

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾಪ್ರ 104 ಕರಅ 2010, ಬೆಂಗಳೂರು, ದಿನಾಂಕ: 02ನೇ ಡಿಸೆಂಬರ್, 2010

ಶ್ರೀ ಬಿ. ಎಸ್. ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರನ್ನು 2011ರಲ್ಲಿ ನಡೆಯಲಿರುವ ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ, ಈ ಸಮ್ಮೇಳನದ ಸಮಿತಿಗೆ ಗೌರವಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್. ವಿ. ರಾಮಚಂದ್ರರಾವ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ.

ಪಿ.ಆರ್. 05

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 262 ಎಲ್‌ಎಸ್‌ಐ 2009, ಬೆಂಗಳೂರು, ದಿನಾಂಕ: 09ನೇ ಡಿಸೆಂಬರ್, 2010

ಡಾ॥ ಜೆ. ಭುವನೇಶ್ವರಿ, ಆಯುರ್ವೇದಿಕ್ ಫಿಸಿಷಿಯನ್ ಕಾರಾವಿ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು ಇವರಿಗೆ ರೂ. 14050-25050ಗಳ ವೇತನ ಶ್ರೇಣಿಯ ಸೀನಿಯರ್ ಆಯುರ್ವೇದಿಕ್ ಫಿಸಿಷಿಯನ್ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಾನಪನ್ನ ಮುಂಬಡ್ತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋವಿಂದಸ್ವಾಮಿ,
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ, (ಕಾರಾವಿ ಯೋ (ವೈ) ಸೇವೆಗಳು)

ಪಿ.ಆರ್. 06

ಅಧಿಸೂಚನೆ

ಸಂಖ್ಯೆ: ಕಾಇ 61 ಎಲ್‌ಎಸ್‌ಐ 2010, ಬೆಂಗಳೂರು, ದಿನಾಂಕ: 09ನೇ ಡಿಸೆಂಬರ್, 2010

ಸರ್ಕಾರಿ ಆದೇಶ ಸಂಖ್ಯೆ ಕಾಇ 356 ಎಲ್‌ಎಸ್‌ಐ 95, ದಿನಾಂಕ: 04-09-2006ರ ಮೂಲಕ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 06 ವರ್ಷಗಳ ಹಾಗೂ 13 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ವಿಮಾ ವೈದ್ಯಾಧಿಕಾರಿಗಳಿಗೆ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಲಾಗಿತ್ತು. ಸದರಿ ಆದೇಶದಲ್ಲಿ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಶ್ಯಕ ನಿಯಮಗಳನ್ನು ರೂಪಿಸಿದ ನಂತರ ಕ್ರಮಬದ್ಧಗೊಳಿಸಲಾಗುವುದೆಂದು ತಿಳಿಸಲಾಗಿದೆ. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಧಿಸೂಚನೆ ಸಂಖ್ಯೆ ಕಾಇ 176 ಎಲ್‌ಎಸ್‌ಐ 2006 ದಿನಾಕ: 07-12-2007ರ ಮೂಲಕ ರೂಪಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡ ವೈದ್ಯಾಧಿಕಾರಿಗಳಿಗೆ ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ ಜಾರಿಗೆ ಬರುವಂತೆ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಈ ಕೆಳಕಂಡಂತೆ ಮಂಜೂರು ಮಾಡಲಾಗಿದೆ.

1) ಈ ಆದೇಶದನ್ವಯ ಬಡ್ತಿ ಹೊಂದಿದ ಅಧಿಕಾರಿಗಳ ಜೇಷ್ಠತೆಯು ಇವರುಗಳು ಬಡ್ತಿ ಹೊಂದುವ ಪೂರ್ವದಲ್ಲಿದ್ದ ಹುದ್ದೆಗಳಲ್ಲಿ ಇರುವಂತೆಯೇ ಮುಂದುವರೆಯುತ್ತದೆ.

2) ಬಡ್ತಿ ಹೊಂದಿಸ ಎಲ್ಲಾ ಅಧಿಕಾರಗಳು ಮುಂದಿನ ಆದೇಶದವರೆಗೆ ಸದ್ಯಕ್ಕೆ ಇರುವ ಇವರು ಕರ್ತವ್ಯನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಯುತ್ತಾರೆ. ಅಂದರೆ ಯಾವುದೇ ರೀತಿಯಲ್ಲಿ ಸ್ಥಾನಪಲ್ಲಟ ಹೊಂದುವುದಿಲ್ಲ.

3) ಇವರುಗಳ ಕಾಲಬದ್ಧ ಪದೋನ್ನತಿಯು ಸರ್ಕಾರಿ ಅಧಿಸೂಚನೆ ಸಂಖ್ಯೆ : ಕಾಇ 356 ಎಲ್‌ಎಸ್‌ಐ 95, ದಿನಾಂಕ: 04-09-2006 ಮತ್ತು ದಿನಾಂಕ: 07-12-2007ರ ಕರ್ನಾಟಕ ಕಾರ್ಮಿಕರ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವಾ (ನೇಮಕಾತಿ) ನಿಯಮಗಳು, 2007ರ ಪ್ರಕಾರದಲ್ಲಿನ ಎಲ್ಲಾ ಷರತ್ತುಗಳಿಗೆ ಸಂಪೂರ್ಣವಾಗಿ ಒಳಪಟ್ಟಿರುತ್ತದೆ.

4) ಕಾಲಮಿತಿ ಮುಂಬಡ್ತಿಯ ಸಂಬಂಧ ಆರ್ಥಿಕ ಸೌಲಭ್ಯವನ್ನು ದಿನಾಂಕ : 07-12-2007 ಅಥವಾ ಆನಂತರದ ಅರ್ಹತಾ ದಿನಾಂಕದಿಂದ ಹೊಂದಲು ಅರ್ಹರಾಗಿರುತ್ತಾರೆ.

5) ಯಾವುದೇ ಹಂತ ಅಥವಾ ಸಂದರ್ಭದಲ್ಲಿ ಮತ್ತು ಯಾವುದೇ ಕಾರಣಗಳಿಂದಾಗಿ ಸದರಿ ಕಾಲಬದ್ಧ ಪದೋನ್ನತಿಯ ಆದೇಶಗಳನ್ನು ಮಾರ್ಪಡಿಸುವ ಅಥವಾ ಹಿಂತೆಗೆದುಕೊಳ್ಳುವ ಮತ್ತು ಈ ಅಧಿಕಾರಿಗಳಿಗೆ ಹಿಂಬಡ್ತಿ ನೀಡುವ ಸಂಪೂರ್ಣ ಹಕ್ಕುಗಳನ್ನು ಮತ್ತು ಅಧಿಕಾರವನ್ನು ಸರ್ಕಾರವು ಕಾಯ್ದಿರಿಸಿಕೊಂಡಿದೆ.

ಕ್ರಸಂ.	ವೈದ್ಯರ ಹೆಸರು, ಸ್ಥಳ ಮತ್ತು ಸೇವೆಗೆ ಸೇರಿದ ದಿನಾಂಕ:	ವಿದ್ಯಾರ್ಹತೆ	ಹಾಲಿ ವೇತನ ಶ್ರೇಣಿ	06 ವರ್ಷಗಳ ಕಾಲಬದ್ಧ ಪದೋನ್ನತಿ ಜಾರಿಗೆ ಬರುವ ದಿನಾಂಕ, ವೇತನ ಶ್ರೇಣಿ	13 ವರ್ಷಗಳ ಕಾಲಬದ್ಧ ಪದೋನ್ನತಿ ಜಾರಿಗೆ ಬರುವ ದಿನಾಂಕ, ವೇತನ ಶ್ರೇಣಿ ಮತ್ತು ಬದಲಾದ ಪದವಾಮ
1.	ಡಾ|| ಎಸ್. ರಾಜು, ವಿಮಾ ವೈದ್ಯಾಧಿಕಾರಿ, ಕಾರಾವಿ ಚಿಕಿತ್ಸಾಲಯ, ಭದ್ರಾವತಿ .21-11-1989	ಎಂ.ಬಿ.ಬಿಎಸ್. ಮತ್ತು ಎಂ.ಡಿ. ಅರವಳಿಕೆ	14050-25050	07-12-2007 15200-25650	07-12-2007 18150-26925 ಹಿರಿಯ ತಜ್ಞರು
2.	ಡಾ|| ಹೆಚ್. ಆರ್. ವಿಜಯಮೂರ್ತಿ, ವಿಮಾ ವೈದ್ಯಾಧಿಕಾರಿ, ಕಾರಾವಿ ಚಿಕಿತ್ಸಾಲಯ, ಶಿವಮೊಗ್ಗ, 22-08-1986	ಎಂ.ಬಿ.ಬಿಎಸ್. ಮತ್ತು ಎಂ.ಎಸ್. ಇ.ಎನ್.ಟಿ	14050-25050	07-12-2007 15200-25650	07-12-2007 18150-26925 ಹಿರಿಯ ತಜ್ಞರು
3.	ಡಾ|| ಎಂ.ಎಸ್. ಪಾಲೇಕರ್, ವಿಮಾ ವೈದ್ಯಾಧಿಕಾರಿ, ಕಾರಾವಿ ಆಸ್ಪತ್ರೆ, ಹುಬ್ಬಳ್ಳಿ, 07-03-1987	ಎಂ.ಬಿ.ಬಿಎಸ್. ಮತ್ತು ಡಿಪ್ಲೋಮಾ ಇನ್ ಡಿ.ವಿ.ಡಿ.	14050-25050	07-12-2007 15200-25650	07-12-2007 18150-26925 ಹಿರಿಯ ತಜ್ಞರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದಸ್ವಾಮಿ,

ಪೀಠಾಧಿಕಾರಿ,

ಕಾರ್ಮಿಕ ಇಲಾಖೆ, (ಕಾರಾವಿ ಯೋ (ವೈ) ಸೇವೆಗಳು)

ಆರ್. 07

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 98 ಸಮನ್ವಯ 2010 (ಭಾಗ), ಬೆಂಗಳೂರು, ದಿನಾಂಕ: 09ನೇ ಡಿಸೆಂಬರ್, 2010

ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಬೆಂಗಳೂರು ಇದರ ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಆರ್ಟಿಕಲ್ಸ್ 93(ಎ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನ ನಿರ್ದೇಶಕರ ಮಂಡಳಿಯ ನಿರ್ದೇಶಕರುಗಳನ್ನಾಗಿ ಈ ಕೆಳಕಂಡ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

1. **ಶ್ರೀ ಪಂಕಜ್ ಕುಮಾರ್ ಪಾಂಡೆ**, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ.
2. **ಶ್ರೀ ಮುನಿಷ್ ಮೌದಗೀಲ್**, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ.
3. **ಶ್ರೀ ಎಂ. ಗೋವಿಂದಪ್ಪ**, ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್.ಬಿ.ಕೃಷ್ಣಪ್ಪನವರ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ.

ಆರ್. 08

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ125 ಇಪಿಎಸ್ 2010, ಬೆಂಗಳೂರು, ದಿನಾಂಕ: 09ನೇ ಡಿಸೆಂಬರ್, 2010

2011ನೇ ವರ್ಷದಲ್ಲಿ 60ವರ್ಷಗಳ ವಯೋಮಿತಿ ಪೂರ್ಣಗೊಳಿಸಲಿರುವ ರಾಜ್ಯ ಅಬಕಾರಿ ಸೇವೆಗೆ ಸೇರಿದ ಈ ಕೆಳಕಂಡ ಅಧಿಕಾರಿಗಳು ಅವರ ಹೆಸರುಗಳ ಮುಂದೆ ಸೂಚಿಸಿರುವ ದಿನಾಂಕಗಳಂದು ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಲಿದ್ದಾರೆ.

ಕ್ರ ಸಂ.	ಅಧಿಕಾರಿಯ ಹೆಸರು ಮತ್ತು ಶ್ರೀಯುತರು	ಜನ್ಮ ದಿನಾಂಕ	ವಯೋ ನಿವೃತ್ತಿ ದಿನಾಂಕ:
	ಫೆಬ್ರವರಿ 2011		
1	ಸಿ. ಮಾದಯ್ಯ, ಅಬಕಾರಿ ಉಪಆಯುಕ್ತರು, ಚಾಮರಾಜನಗರ ಜಿಲ್ಲೆ	20-02-1951	28-02-2011
	ಮಾರ್ಚ್ 2011		
2	ಡಿ.ಎಸ್.ನಾಗೇಂದ್ರಪ್ಪ, ಅಬಕಾರಿ ಜಂಟಿ ಆಯುಕ್ತರು, ಬೆಂಗಳೂರು ವಿಭಾಗ	26-03-1951	31-03-2011
3	ಎಸ್.ಟಿ. ಗೌಡರ್, ಅಬಕಾರಿ ಉಪ ಆಯುಕ್ತರು, ಹಾವೇರಿ ಜಿಲ್ಲೆ	26-03-1951	31-03-2011
	ಏಪ್ರಿಲ್-2011		
4	ಬಿ.ಎಸ್.ಹೈದರಾಲಿಖಾನ್, ಅಬಕಾರಿ ಉಪಆಯುಕ್ತರು, ಹಾಸನ ಜಿಲ್ಲೆ, ಹಾಸನ	20-04-1951	30-04-2011
5	ಜೆ.ಕೃಷ್ಣ, ಅಬಕಾರಿ ಉಪಆಯುಕ್ತರು, ಶಿವಮೊಗ್ಗ ಜಿಲ್ಲೆ	21-04-1951	30-04-2011
	ಮೇ-2011		
6	ಹೆಚ್.ಎಫ್. ಕುಪ್ಪೆಲೂರ್, ಅಬಕಾರಿ ಅಧೀಕ್ಷಕರು, ಮೆ: ರೇಣುಕಾ ಷುಗರ್ ಬೆಳಗಾವಿ.	01-06-1951	31-05-2011
7	ಜೆ.ಹೆಚ್ ಉಕ್ಕಡಗತ್ರಿ, ಅಬಕಾರಿ ಉಪ ಆಯುಕ್ತರು, ಗುಲ್ಬರ್ಗಾ ಜಿಲ್ಲೆ	01-06-1951	31-05-2011
8	ವಿಜಯಕುಮಾರ್, ಅಬಕಾರಿ ಉಪ ಆಯುಕ್ತರು, ಬೀದರ್ ಜಿಲ್ಲೆ	01-06-1951	31-05-2011
	ಜುಲೈ-2011		
9	ಪಿ.ರಮೇಶ್, ಅಬಕಾರಿ ಅಧೀಕ್ಷಕರು, ಅಬಕಾರಿ ಜಂಟಿ ಆಯುಕ್ತರ ಕಛೇರಿ, ಮೈಸೂರು ವಿಭಾಗ	13-07-1951	31-07-2011
10	ಟಿ.ಜಯರಾಂ, ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ	29-07-1951	31-07-2011
11	ಟಿ.ಬಿ.ಕೊಂಡಾಪುರ, ಅಬಕಾರಿ ಉಪ ಆಯುಕ್ತರು, ಬಳ್ಳಾರಿ ಜಿಲ್ಲೆ	16-07-1951	31-07-2011
	ಡಿಸೆಂಬರ್-2011		
12	ಡಿ.ಜೆ.ಶಂಕರಪ್ಪ, ಅಬಕಾರಿ ಅಧೀಕ್ಷಕರು, ಮೆ: ಖೋಡೆ ಬ್ರೆವರಿಸ್ (ಬ್ರಿವರಿ ವಿಭಾಗ) ಬೆಂಗಳೂರು.	07-12-1951	31-12-2011

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜಿ. ನಾರಾಯಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಪಿ.ಆರ್. 09

ಅಧಿಸೂಚನೆ

ಸಂಖ್ಯೆ: ಎಫ್‌ಡಿ 62 ಇಪಿಎಸ್ 2010, ಬೆಂಗಳೂರು, ದಿನಾಂಕ: 04ನೇ ಡಿಸೆಂಬರ್, 2010

ಆಡಳಿತಾತ್ಮಕ ಕಾರಣಗಳಿಂದ ಅಧಿಸೂಚನೆ ಸಂಖ್ಯೆ: ಎಫ್‌ಡಿ 62 ಇಪಿಎಸ್ 2010, ದಿನಾಂಕ:03-12-2010ರನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜಿ. ನಾರಾಯಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಪಿ.ಆರ್. 10

ಅಧಿಸೂಚನೆ

ಸಂಖ್ಯೆ: ಆಇ 62 ಇಪಿಎಸ್ 2010, ಬೆಂಗಳೂರು, ದಿನಾಂಕ: 03ನೇ ಡಿಸೆಂಬರ್, 2010

ರಾಜ್ಯ ಅಬಕಾರಿ ಸೇವೆಗೆ ಸೇರಿದ ಈ ಕೆಳಕಂಡ ಅಬಕಾರಿ ಜಂಟಿ ಆಯುಕ್ತರುಗಳಿಗೆ ವೇತನ ಶ್ರೇಣಿ ರೂ. 26250-675-30300-750-34800-850-36500ರ ಅಬಕಾರಿ ಅಪರ ಆಯುಕ್ತರ ವೃಂದಕ್ಕೆ ಸ್ಥಾನಪನ್ನ ಮುಂಬಡ್ತಿಗೊಳಿಸಿ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕ್ರಸಂ.	ಅಧಿಕಾರಿ ಹೆಸರು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ ಮತ್ತು ಸ್ಥಳ	ಅಬಕಾರಿ ಅಪರ ಆಯುಕ್ತರ ವೃಂದಕ್ಕೆ ಸ್ಥಾನಪನ್ನ ಮುಂಬಡ್ತಿ ನೀಡಿ ನೇಮಿಸಿರುವ ಹುದ್ದೆ ಮತ್ತು ಸ್ಥಳ
1	ಶ್ರೀ. ಡಿ.ಎಸ್. ನಾಗೇಂದ್ರಪ್ಪ, ಅಬಕಾರಿ ಜಂಟಿ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.	ಅಪರ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ ಪಾನೀಯ ನಿಗಮ, ಇಲ್ಲಿ ಹೊಸದಾಗಿ ಸೃಜಿಸಲಾಗಿರುವ ಖಾಲಿ ಹುದ್ದೆಯಲ್ಲಿ
2	ಶ್ರೀ ಹೆಚ್.ಪಿ.ಈರಪ್ಪ, ಅಬಕಾರಿ ಜಂಟಿ ಆಯುಕ್ತರು, ರಾಜ್ಯ ವಿಚಕ್ಷಣದಳ ಬೆಂಗಳೂರು.	ಅಪರ ಅಬಕಾರಿ ಆಯುಕ್ತರು (ಜಾರಿ ಮತ್ತು ಅಪರಾಧ) ಅಬಕಾರಿ ಆಯುಕ್ತರ ಕಛೇರಿ, ಇಲ್ಲಿ ಹೊಸದಾಗಿ ಸೃಜಿಸಲಾಗಿರುವ ಖಾಲಿ ಹುದ್ದೆಯಲ್ಲಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜಿ. ನಾರಾಯಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಪಿ.ಆರ್. 11

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆನಾಸ 60 ಎಫ್‌ಪಿಪಿ 2010, ಬೆಂಗಳೂರು, ದಿನಾಂಕ: 10ನೇ ಡಿಸೆಂಬರ್, 2010

ಸರ್ಕಾರದ ಅಧಿಸೂಚನೆ ಸಂಖ್ಯೆ : ಆನಾಸ 60 ಎಫ್‌ಪಿಪಿ 2010, ದಿನಾಂಕ : 02-12-2010ರಲ್ಲಿ ಹೊರಡಿಸಿರುವ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ಈ ಕೆಳಕಂಡಂತೆ ಮಾರ್ಪಡಿಸಿದೆ.

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಅನುಚ್ಛೇಧ 75 (iii) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಸಿ. ಅಶ್ವತ್ಥ್, ಮಾಜಿ ಶಾಸಕರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮೇಲ್ಕಂಡ ನಿಗಮದ ನಿರ್ದೇಶಕರ ಮಂಡಳಿಯ ನಿರ್ದೇಶಕರನ್ನಾಗಿಯೂ ಹಾಗೂ ನಿಗಮದ ಅಧ್ಯಕ್ಷರನ್ನಾಗಿಯೂ ಶ್ರೀ ಹೆಚ್. ಹಾಲಪ್ಪ, ಮಾಜಿ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಮತ್ತು ನಿಗಮದ ನಿರ್ದೇಶಕರು ಹಾಗೂ ಅಧ್ಯಕ್ಷರು ಇವರ ಸ್ಥಾನದಲ್ಲಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಬಿ. ರಘುನಾಥ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಪಿ.ಆರ್. 12

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 145 ಪೊಪೆಸೆ 2010, ಬೆಂಗಳೂರು, ದಿನಾಂಕ: 2ನೇ ಡಿಸೆಂಬರ್, 2010

ಸರ್ಕಾರಿ ಲೋಕೋಪಯೋಗಿ ಅಧಿಸೂಚನೆ ಸಂಖ್ಯೆ : ಲೋಇ 258 ಸೇಎಸು 2010 ದಿನಾಂಕ : 12-7-2010ರಲ್ಲಿ ಶ್ರೀ ಮಾಧವ, ಅಧೀಕ್ಷಕ ಇಂಜಿನಿಯರ್, ಇವರನ್ನು ಮರು ಸ್ಥಳನಿಯಕ್ತಿಗೊಳಿಸಲು ಒಳಾಡಳಿತ ಇಲಾಖೆಯ ವಶಕ್ಕೆ ನೀಡಿದ್ದು, ಸದರಿಯವರನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತಕ್ಕೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 13

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 50 ಭಾನಿವಿ 2010, ಬೆಂಗಳೂರು, ದಿನಾಂಕ: 13ನೇ ಡಿಸೆಂಬರ್, 2010

ಭಾಷಾಂತರ ನಿರ್ದೇಶನಾಲಯ ಸೇವೆಗೆ ಸೇರಿದ ಹಾಗೂ ಪ್ರಸ್ತುತ ಉಚ್ಚ ನ್ಯಾಯಾಲಯದ ಕರ್ನಾಟಕ ಲಾ ರಿಪೋರ್ಟಿಂಗ್ ಕೌನ್ಸಿಲ್‌ನಲ್ಲಿ ಉಪ ಭಾಷಾಂತರಕಾರರಾಗಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಸ್.ಎಸ್. ಪರಮೇಶ್, ಸಂಶೋಧನಾಧಿಕಾರಿ (ವೇತನ ಶ್ರೇಣಿ ರೂ. 11,400–21,600) ಇವರಿಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಭಾಷಾಂತರ ನಿರ್ದೇಶನಾಲಯದಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗೆ (ವೇತನ ಶ್ರೇಣಿ ರೂ. 14,050–25,050) ಸ್ಥಾನಪನ್ನ ಮುಂಬಡ್ತಿ ನೀಡಿ, ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ. ಶ್ರೀಧರ್,
ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಪಿ.ಆರ್. 14

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 50 ಭಾನಿವಿ 2010, ಬೆಂಗಳೂರು, ದಿನಾಂಕ: 13ನೇ ಡಿಸೆಂಬರ್, 2010

ಶ್ರೀ ದೇವರಾಜು, ಸಹಾಯಕ ನಿರ್ದೇಶಕರು, ವೇತನ ಶ್ರೇಣಿ ರೂ. 14,050–25,050, ಭಾಷಾಂತರ ನಿರ್ದೇಶನಾಲಯ, ಇವರಿಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರೂ. 18,150–26,925ರ ವೇತನ ಶ್ರೇಣಿಯಲ್ಲಿ ಉಪ ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ. ಶ್ರೀಧರ್,
ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಪಿ.ಆರ್. 15

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 48 ಇಪಿಎಸ್ 2010, ಬೆಂಗಳೂರು, ದಿನಾಂಕ: 02ನೇ ಡಿಸೆಂಬರ್, 2010

ರಾಜ್ಯ ಅಬಕಾರಿ ಸೇವೆಗೆ ಸೇರಿದ ಈ ಕೆಳಕಂಡ ಅಬಕಾರಿ ಅಧೀಕ್ಷಕರು, ಇವರುಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು/ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ	ವರ್ಗಾಯಿಸಿ ನೇಮಿಸಲಾದ ಸ್ಥಳ
1	ಶ್ರೀಮತಿ ಶೈಲಜಾ.ಎ.ಕೋಟೆ, ಅಬಕಾರಿ ಅಧೀಕ್ಷಕರ ವೃಂದಕ್ಕೆ ಬಡ್ತಿ ನೀಡಿ ಮೆ॥ ಓರಿಯನ್ ಡಿಸ್ಟಿಲರಿಗೆ ಸ್ಥಳ ನಿಯುಕ್ತಿ ಆದೇಶದಲ್ಲಿ	ಶ್ರೀ ಎಂ. ತಿಮ್ಮೇಗೌಡ, ಅಬಕಾರಿ ಅಧೀಕ್ಷಕರು, ಇಂದಿರಾನಗರ, ಇ.ಐ.ಬಿ., ಬೆಂಗಳೂರು ಇವರ ವರ್ಗಾವಣೆಯಿಂದ ತೆರವಾದ ಹುದ್ದೆಯಲ್ಲಿ
2	ಶ್ರೀ ಎಂ. ತಿಮ್ಮೇಗೌಡ, ಅಬಕಾರಿ ಅಧೀಕ್ಷಕರು, ಇಂದಿರಾನಗರ, ಇ.ಐ.ಬಿ., ಬೆಂಗಳೂರು	ಮೆ॥ ಶ್ರೀ ವೆಂಕಟೇಶ್ವರ, ಡಿಸ್ಟಿಲರಿ, ಬೆಂಗಳೂರು ಇಲ್ಲಿ ಖಾಲಿ ಇರುವ ಅಬಕಾರಿ ಅಧೀಕ್ಷಕರ ಹುದ್ದೆಯಲ್ಲಿ
3	ಶ್ರೀ ಜಗದೀಶ್ ನಾಯಕ್, ಅಬಕಾರಿ ಅಧೀಕ್ಷಕರು, ಮೆ॥ ಬನ್ನಾರಿ ಅಮ್ಮನ್ ಶುಗರ್ಸ್ ಲಿ., ನಂಜನಗೂಡು, ಮೈಸೂರು ಜಿಲ್ಲೆ	ಅಬಕಾರಿ ಅಧೀಕ್ಷಕರು, ಜಯನಗರ ಇ.ಐ.ಬಿ. ಇಲ್ಲಿ ಖಾಲಿ ಇರುವ ಹುದ್ದೆಗೆ
4	ಶ್ರೀ ಎ.ಎಲ್. ನಾಗೇಶ್, ಅಬಕಾರಿ ಅಧೀಕ್ಷಕರು, ಮೆ॥ ಎನ್.ಎಸ್.ಎಲ್. ಡಿಸ್ಟಿಲರಿ, ಕೊಪ್ಪ, ಮದ್ದೂರು–ಮಂಡ್ಯ ಜಿಲ್ಲೆ	ಅಬಕಾರಿ ಜಂಟಿ ಆಯುಕ್ತರ ಕಛೇರಿ, ಮೈಸೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪಿ. ರಮೇಶ್, ಅಬಕಾರಿ ಅಧೀಕ್ಷಕರು ಇವರ ಸ್ಥಳಕ್ಕೆ
5	ಶ್ರೀ ಪಿ. ರಮೇಶ್, ಅಬಕಾರಿ ಅಧೀಕ್ಷಕರು, ಅಬಕಾರಿ ಜಂಟಿ ಆಯುಕ್ತರ ಕಛೇರಿ, ಮೈಸೂರು	ಮೆ॥ ಜೆಮಿನಿ ಡಿಸ್ಟಿಲರೀಸ್, ನಂಜನಗೂಡು ಇಲ್ಲಿ ಖಾಲಿ ಇರುವ ಅಬಕಾರಿ ಅಧೀಕ್ಷಕರ ಹುದ್ದೆಗೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಜಿ. ನಾರಾಯಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಪಿ.ಆರ್. 16

ಅಧಿಸೂಚನೆ

ಸಂಖ್ಯೆ: ಆಇ 48 ಇಪಿಎಸ್ 2010, ಬೆಂಗಳೂರು, ದಿನಾಂಕ: 02ನೇ ಡಿಸೆಂಬರ್, 2010

ರಾಜ್ಯ ಅಬಕಾರಿ ಸೇವೆಗೆ ಸೇರಿದ ಈ ಕೆಳಕಂಡ ಅಬಕಾರಿ ಉಪ ಅಧೀಕ್ಷಕರು, ಇವರುಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು/ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ	ವರ್ಗಾಯಿಸಿ ನೇಮಿಸಲಾದ ಸ್ಥಳ
1	ಶ್ರೀ ಆಸಿಫ್ ಘನಿ, ಅಬಕಾರಿ ಉಪ ಅಧೀಕ್ಷಕರು, ಕೋರಮಂಗಲ ಉಪ ವಿಭಾಗ, ಬೆಂಗಳೂರು	ಮೆ॥ ಖೋಡೆ ಆರ್.ಸಿ.ಎ., ಬೆಂಗಳೂರು ಇಲ್ಲಿ ಖಾಲಿ ಇರುವ ಅಬಕಾರಿ ಉಪ ಅಧೀಕ್ಷಕರ ಹುದ್ದೆಯಲ್ಲಿ
2	ಶ್ರೀ ವೈ.ಆರ್. ಮೋಹನ್, ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ ಬೆಂಗಳೂರು (ಪಶ್ಚಿಮ), ಬೆಂಗಳೂರು	ಶ್ರೀ ಆಸಿಫ್ ಘನಿ, ಅಬಕಾರಿ ಉಪ ಅಧೀಕ್ಷಕರು, ಕೋರಮಂಗಲ ಉಪ ವಿಭಾಗ, ಇವರ ವರ್ಗಾವಣೆಯಿಂದ ತೆರವಾದ ಹುದ್ದೆಯಲ್ಲಿ
3	ಶ್ರೀ ಎಲ್.ಎ. ಮಂಜುನಾಥ್, ಅಬಕಾರಿ ಉಪ ಅಧೀಕ್ಷಕರು, ಮಧುಗಿರಿ ಉಪ ವಿಭಾಗ	ಶ್ರೀಮತಿ ಶೈಲಜಾ.ಎ.ಕೋಟೆ, ಉಪ ಅಧೀಕ್ಷಕರು, ಇವರ ಮುಂಬಡ್ತಿಯಿಂದ ತೆರವಾದ ಹುದ್ದೆಯಲ್ಲಿ
4	ಶ್ರೀ ಟಿ. ನಾಗರಾಜಪ್ಪ, ಅಬಕಾರಿ ಉಪ ಅಧೀಕ್ಷಕರು. ಹರಿಹರ ಉಪ ವಿಭಾಗ, ದಾವಣಗೆರೆ ಜಿಲ್ಲೆ	ದಾವಣಗೆರೆ ಉಪ ವಿಭಾಗ, ಇಲ್ಲಿ ಖಾಲಿ ಇರುವ ಅಬಕಾರಿ ಉಪ ಅಧೀಕ್ಷಕರ ಹುದ್ದೆಗೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಜಿ. ನಾರಾಯಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಪಿ.ಆರ್. 17

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 234 ಪಿಪಿಇ 2010, ಬೆಂಗಳೂರು, ದಿನಾಂಕ: 21ನೇ ಡಿಸೆಂಬರ್, 2010

ಮಹಮದ್ ಷಫಿ ಎಂ. ಕಿತ್ತೂರ್, ಸರ್ಕಾರಿ ಅಭಿಯೋಜಕರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ ಇವರಿಗೆ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ವೇತನ ಶ್ರೇಣಿಯ ರೂ. 20025-525-22650-600-26250-675-28275ರ ಜಂಟಿ ಅಭಿಯೋಗ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ಕಛೇರಿ, ಬೆಂಗಳೂರು ಇಲ್ಲಿ ಖಾಲಿ ಇರುವ ಜಂಟಿ ಅಭಿಯೋಗ ನಿರ್ದೇಶಕರ ಹುದ್ದೆಗೆ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 18

ಅಧಿಸೂಚನೆ

ಸಂಖ್ಯೆ: ಹೆಚ್‌ಡಿ 544 ಎಸ್‌ಎಸ್‌ಟಿ 2010, ಬೆಂಗಳೂರು, ದಿನಾಂಕ: 14ನೇ ಡಿಸೆಂಬರ್, 2010

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆ-2010ರ ಪ್ರಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಗೆ ಬರುವ ನಾಲ್ಕು ತಾಲ್ಲೂಕುಗಳಿಗೆ ಅಂದರೆ ಪ್ರತಿ ತಾಲ್ಲೂಕಿಗೆ ಒಬ್ಬರಂತೆ ಚುನಾವಣೆ ಪ್ರಕ್ರಿಯೆಗಳು ಮುಕ್ತಾಯಗೊಳ್ಳುವವರೆಗೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ದಂಡ ಪ್ರಕ್ರಿಯಾ ಸಂಹಿತೆ 1973 (ಕೇಂದ್ರ ಕಾಯಿದೆ ಸಂಖ್ಯೆ: 2-1974)ರ ಕಲಂ 21ರಲ್ಲಿನ ಅಧಿಕಾರವನ್ನು ಚಲಾಯಿಸಿ ಸದರಿ ಸಂಹಿತೆಯಡಿ ನೀಡಬಹುದಾದ ಎಲ್ಲಾ ಅಧಿಕಾರಗಳನ್ನು ನೀಡಿ, ಈ ಕೆಳಕಂಡ ಪಟ್ಟಿಯ ಕಲಂ(2)ರಲ್ಲಿ ನಮೂದಿಸಿರುವ ಹುದ್ದೆಯ ಅಧಿಕಾರಿಗಳನ್ನು ಕಾರ್ಯನಿರ್ವಾಹಕ ದಂಡಾಧಿಕಾರಿ ಅಂದರೆ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳನ್ನಾಗಿ ಕಲಂ(3)ರಲ್ಲಿ ನಮೂದಿಸಿರುವ ಸ್ಥಳಗಳಿಗೆ ಈ ಕೂಡಲೇ ಜಾರಿಗೆ ಬರುವಂತೆ ನೇಮಿಸಿ ಆದೇಶಿಸಲಾಗಿದೆ.

ಕ್ರಸಂ.	ಅಧಿಕಾರಿಯ ಪದನಾಮ	ಕ್ಷೇತ್ರ ವ್ಯಾಪ್ತಿ
(1)	(2)	(3)
01	ಜಂಟಿ ನಿರ್ದೇಶಕರು ಹಾಗೂ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ದೊಡ್ಡಬಳ್ಳಾಪುರ ತಾಲ್ಲೂಕು

(1)	(2)	(3)
02	ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ದೇವನಹಳ್ಳಿ ತಾಲ್ಲೂಕು
03	ಉಪ ನಿರ್ದೇಶಕರು, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ಜಿಲ್ಲಾಧಿಕಾರಿಯವರ ತಾಂತ್ರಿಕ ಸಹಾಯಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ನೆಲಮಂಗಲ ತಾಲ್ಲೂಕು
04	ಸಹಕಾರ ಸಂಘಗಳ ಉಪನಿಬಂಧಕರು, ಸಹಕಾರ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ಹೊಸಕೋಟೆ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 19

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 74 ಎಲ್ಎಜಿ 2010, ಬೆಂಗಳೂರು, ದಿನಾಂಕ: 15ನೇ ಡಿಸೆಂಬರ್, 2010

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977ರಲ್ಲಿನ ಷರತ್ತಿಗೊಳಪಟ್ಟು ದಿನಾಂಕ: 21–04–2010 ರಿಂದ ಮುಂದಿನ ಆದೇಶದವರೆಗೆ ಅಥವಾ ಹೊಸದಾಗಿ ಸರ್ಕಾರಿ ವಕೀಲರನ್ನು ನೇಮಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಶ್ರೀ ಎ. ರವೀಂದ್ರ, ವಕೀಲರು, ಇವರನ್ನು ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಯಲ್ಲಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಯ್ಯದ್ ಅಬ್ದುಲ್ ನಜೀರ್,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 20

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 223 ಐಡಿಎಂ 2010, ಬೆಂಗಳೂರು, ದಿನಾಂಕ: 15ನೇ ಡಿಸೆಂಬರ್, 2010

ಅಧ್ಯಕ್ಷಾಧಿಕಾರಿ, ಕಾರ್ಮಿಕ ನ್ಯಾಯಾಲಯ, ಬೆಂಗಳೂರು, ರವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 66 ರನ್ವಯ ಅಧ್ಯಕ್ಷಾಧಿಕಾರಿ, 3ನೇ ಅಪರ ಕಾರ್ಮಿಕ ನ್ಯಾಯಾಲಯ, ಬೆಂಗಳೂರು (ಖಾಲಿ ಇರುವ ಸ್ಥಳ) ಈ ಹುದ್ದೆಯಲ್ಲಿ ಸಮವರ್ಥಿ ಪ್ರಭಾರದಲ್ಲಿಡಲಾಗಿದೆ.

ಅಧ್ಯಕ್ಷಾಧಿಕಾರಿ, ಅಪರ ಔದ್ಯೋಗಿಕ ನ್ಯಾಯಾಧೀಕರಣ, ಬೆಂಗಳೂರು, ರವರನ್ನು ದಿನಾಂಕ: 02–12–2010ರಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 66ರನ್ವಯ ಅಧ್ಯಕ್ಷಾಧಿಕಾರಿ, ಔದ್ಯೋಗಿಕ ನ್ಯಾಯಾಧೀಕರಣ, ಬೆಂಗಳೂರು, (ಖಾಲಿ ಇರುವ ಸ್ಥಳ) ಈ ಹುದ್ದೆಯಲ್ಲಿ ಸಮವರ್ಥಿ ಪ್ರಭಾರದಲ್ಲಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋವಿಂದಸ್ವಾಮಿ,
ಪೀಠಾಧಿಕಾರಿ, ಕಾರ್ಮಿಕ ಇಲಾಖೆ,
(ಕಾರಾವಿ ಯೋ (ವೈ) ಸೇವೆಗಳು)

ಪಿ.ಆರ್. 21

PERSONNEL & ADMINISTRATIVE REFORMS SECRETARIAT

NOTIFICATION

NO. DPAR 252 SPS 2009, Bangalore, Dated 4th December, 2010

The Notification No.1-18011/6/2010 IPS-IV, dated 23-11-2010 of Government of India , Ministry of Home Affairs, New Delhi is hereby republished:

No.I-18011/6/2010-IPS-IV

Government of India , Ministry of Home Affairs,

Room No 220, North Block,
New Delhi-110001
Dated: the 23rd November, 2010.

NOTIFICATION

In exercise of the powers conferred by Rule 3-A of the Indian Police Service (Probation) Rules, 1954, the President is pleased to confirm in the Indian Police Service the following members of the Indian Police Service borne on the cadre of Karnataka with effect from the dates mentioned against their names :-

Sl No	Name of the IPS Probationer S/Shri	date of confirmation
1.	Chandragupta, IPS (KTK;2006)	29-08-2008
2.	Thiyagarajan K, IPS (KTK;2006)	29-08-2008

Sd/-
Rajinder Kumar,
Section Officer,
No.1-18011/6/2010-IPS-IV
Dated the 23rd November, 2010.

By Order and in the name of the Governor of Karnataka
ASHOK P. ATRE,
Under Secretary to Government,
P.R. 22
DPAR (Services- IV)

NOTIFICATION

NO. DPAR 685 SAS 2010, Bangalore, Dated 4th December, 2010

The services of ***Dr R.G.Nadadur, IAS (KN 80), waiting for posting,*** are placed at the disposal of Government of India with immediate effect and until further orders for appointment ***as Director (Personnel, Planning and Programme Monitoring) in the Indian Space Research Organisation, Department of Space,*** on central deputation basis.

Dr. R.G. Nadadur, IAS is relieved of his duties in the State Government with effect from 04-12-2010 Afternoon, with instructions to take up the new assignment at the Centre.

This issues in pursuance of the Communication No.22/7/2010-EO(SM-I), dated 1-12-2010 from the Secretariat of the Appointments Committee of the Cabinet, Department of Personnel & Training, Government of India & Office Order No. 12011/17/2010, dated 02-12-2010 of the Department of Space, Government of India.

By Order and in the name of the Governor of Karnataka,
K.G.ANANTHA,
Under Secretary to Government,
P.R. 23
DP & AR (Services- I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 134 ಶಿಸನೇ 2010, ಬೆಂಗಳೂರು, ದಿನಾಂಕ: 25ನೇ ನವೆಂಬರ್, 2010

ದಿನಾಂಕ 18-11-2010ರ ಅಧಿಸೂಚನೆ ಸಂಖ್ಯೆ : ಸಿಐ 60 ಸಿಎಂಸಿ 2010ರಲ್ಲಿ ಶ್ರೀ ಎಸ್. ವಿ. ರಾಮಚಂದ್ರ, ಮಾಜಿ ಶಾಸಕರು, ಜಗಳೂರು ಇವರನ್ನು ಮೆ॥ ಹಟ್ಟಿ ಚಿನ್ನದ ಗಣಿ ಕಂಪೆನಿ ನಿಯಮಿತ, ಬೆಂಗಳೂರು ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಸದರಿಯವರಿಗೆ ಅವರು ಸದರಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನು ನೀಡಲಾಗಿದೆ.

ದಿನಾಂಕ: 20-11-2010ರ ಅಧಿಸೂಚನೆ ಸಂಖ್ಯೆ: ಸಿಐ 150 ಸಿಎಂಐ 2008(1)ರಲ್ಲಿ ಶ್ರೀ ಎಂ. ಸಿ. ಅಶ್ವಥ್, ಮಾಜಿ ಶಾಸಕರು, ಚನ್ನಪಟ್ಟಣ, ಇವರನ್ನು ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ, ಇದರ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಸದರಿಯವರಿಗೆ ಅವರು ಸದರಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನು ನೀಡಲಾಗಿದೆ.

ದಿನಾಂಕ: 20-11-2010ರ ಅಧಿಸೂಚನೆ ಸಂಖ್ಯೆ: ಸಿಡಿ 59 ಡಬ್ಲ್ಯೂಹೆಚ್‌ಸಿ 2010ರಲ್ಲಿ ಶ್ರೀ ಎಂ. ನಾರಾಯಣಸ್ವಾಮಿ, ಮಾಜಿ ಶಾಸಕರು, ಬಂಗಾರಪೇಟೆ, ಇವರನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ, ಇದರ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಸದರಿಯವರಿಗೆ ಅವರು ಸದರಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ರಹಮತ್ ಉಲ್ಲಾ,
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 24
ಸಿ.ಆ.ಸು. ಇಲಾಖೆ (ರಾಜ್ಯ ಶಿಷ್ಟಾಚಾರ)

ಅಧಿಸೂಚನೆ

ಸಂಖ್ಯೆ: ಸಿಆಸುಇ 108 ಸೇಇಮು 2010, ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್, 2010

ಶ್ರೀ ಕಂಚಿವರದಯ್ಯ, ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನ ಶ್ರೇಣಿ ರೂ. 20025-525-22650-600-26250-675-28275ರ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಈ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ. ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 25

ಅಧಿಸೂಚನೆ

ಸಂಖ್ಯೆ: ಸಿಆಸುಇ 09 ಸೇಇಮು 2009, ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್, 2010

ಶ್ರೀ ಓ. ಬೊಮ್ಮಣ್ಣ, ಉಪ ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ, ಆಸ್ತಿ ಮತ್ತು ಋಣ ನಿರ್ವಹಣೆ ಇಲಾಖೆ, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನ ಶ್ರೇಣಿ ರೂ. 22125-525-22650-600-26250-675-30300ರ ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ, ಆಸ್ತಿ ಮತ್ತು ಋಣ ನಿರ್ವಹಣೆ ಇಲಾಖೆ, ಈ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ. ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 26

ಅಧಿಸೂಚನೆ

ಸಂಖ್ಯೆ: ಸಿಆಸುಇ 60 ಸೇಉನ್ಯಾ 2010, ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್, 2010

ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ: ಜಿಓಬಿ (1) 1/2010, ದಿನಾಂಕ : 10-12-2010ರಲ್ಲಿ ಶ್ರೀ ಪಿ.ಜಿ. ನಾಡಗೌಡ, ಅಧ್ಯಕ್ಷಾಧಿಕಾರಿ ಕೈಗಾರಿಕಾ ನ್ಯಾಯಾಧಿಕರಣ, ಬೆಂಗಳೂರು, ಇವರು ದಿನಾಂಕ: 30-11-2010ರಂದು ವಯೋನಿವೃತ್ತಿ ಹೊಂದಿದ್ದು ಸದರೀ ಖಾಲಿ ಹುದ್ದೆಗೆ ಅಧ್ಯಕ್ಷಾಧಿಕಾರಿ ಹೆಚ್ಚುವರಿ ಕೈಗಾರಿಕಾ ನ್ಯಾಯಾಧಿಕರಣ, ಬೆಂಗಳೂರು, ಇವರನ್ನು ದಿನಾಂಕ : 02-12-2010ರಿಂದ ಜಾರಿಗೆ ಬರುವಂತೆ ಸಮವರ್ತಿ ಪ್ರಭಾರದಲ್ಲಿಡುವಂತೆ ಕೋರಿರುತ್ತಾರೆ.

ಅದರಂತೆ, ಅಧ್ಯಕ್ಷಾಧಿಕಾರಿ ಹೆಚ್ಚುವರಿ ಕೈಗಾರಿಕಾ ನ್ಯಾಯಾಧಿಕರಣ, ಬೆಂಗಳೂರು, ಇವರನ್ನು ದಿನಾಂಕ : 02-12-2010 ರಿಂದ ಜಾರಿಗೆ ಬರುವಂತೆ ಅಧ್ಯಕ್ಷಾಧಿಕಾರಿ ಕೈಗಾರಿಕಾ ನ್ಯಾಯಾಧಿಕರಣ, ಬೆಂಗಳೂರು, ಈ ಹುದ್ದೆಯಲ್ಲಿ ಸಮವರ್ತಿ ಪ್ರಭಾರದಲ್ಲಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ. ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 27

ಅಧಿಸೂಚನೆ

ಸಂಖ್ಯೆ: ಸಿಆಸುಇ 255 ಎಸ್ಐಎಸ್ 2010, ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್, 2010

ಶ್ರೀ ಡಿ.ಎನ್. ನಾಯಕ್, ಭಾ.ಆ.ಸೇ., ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರಿಗೆ ದಿನಾಂಕ: 24-12-2010 ರಿಂದ 27-12-2010ವರೆಗಿನ ಸಾಂದರ್ಭಿಕ/ಸಾರ್ವತ್ರಿಕ ರಜೆ ಅವಧಿಯಲ್ಲಿ 2006-09ರ ಡಿಸೆಂಬರ್ 2010 ರವರೆಗೆ ವಿಸ್ತರಿಸಿದ ಬ್ಲಾಕ್ ಅವಧಿಯಲ್ಲಿ **ಗೋವಾಗೆ** ಹೋಗಿ-ಬರಲು ರಜಾ ಪ್ರಯಾಣ ರಿಯಾಯಿತಿ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಸದರಿ ಉದ್ದೇಶಕ್ಕಾಗಿ ತಗಲುವ ವಾಸ್ತವಿಕ ಪ್ರಯಾಣ ವೆಚ್ಚದ ಶೇಕಡ 90ರಷ್ಟು ಹಣವನ್ನು ಅಂತಿಮ ಪ್ರಯಾಣಭತ್ಯೆ ಬಿಲ್ಲಿನಲ್ಲಿ ಹೊಂದಾಣಿಕೆ ಮಾಡುವ ಷರತ್ತಿಗೆ ಒಳಪಟ್ಟು ಮುಂಗಡ ಪ್ರಯಾಣಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: O.M.F.No. 31011/4/2008-Estt.(A), ದಿನಾಂಕ: 23-09-2008 ರನ್ವಯ 10 ದಿನಗಳ ಗಳಿಕೆ ರಜೆಯ ನಗದೀಕರಣ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಸಹ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಜಿ.ಅನಂತ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-1),

ಪಿ.ಆರ್. 28

ಅಧಿಸೂಚನೆ

ಸಂಖ್ಯೆ: ಸಿಆಸುಇ 134 ಶಿಸನೇ 2010, ಬೆಂಗಳೂರು, ದಿನಾಂಕ: 18ನೇ ಡಿಸೆಂಬರ್, 2010

ಶ್ರೀ ಸುನೀಲ್ ವಲ್ಲಾಪುರೆ, ಅಧ್ಯಕ್ಷರು ಡಾ.ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನದ ಉನ್ನತ ಅಧಿಕಾರ ಸಮಿತಿ, ಇವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನು ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ವಿ.ರಾಮು,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ರಾಜ್ಯ ಶಿಷ್ಟಾಚಾರ)

ಪಿ.ಆರ್. 29

PERSONNEL AND ADMINISTRATIVE REFORMS SECRETARIAT

NOTIFICATION

No: DPAR 172 SFP 2010, Bangalore, Dated 18th December, 2010

Sri G. V. Ranga Rao, IFS (KN-90), Conservator of Forests, Working Plan Chikkamagalur is transferred with immediate effect and his services are placed at the disposal of Minor Irrigation Department with immediate effect until further orders for being posted as Conservator of Forests and Director, Planning and Implementation, Karnataka Jalasamvardhana Yojana Sangha, Bangalore in the existing vacancy.

The orders issued in Government Notification No. DPAR 131 SFP 2010 dated 21-10-2010 relating to posting of Smt. Anita S. Arekal, IFS (KN-89) as Chief Conservator of Forest and Director, Planning and Implementation, Karnataka Jalasamvardhana Yojana Sangha, Bangalore are withdrawn and status cancelled.

This Notification is issued with the concurrence of State Election Commission, Karnataka, Bangalore vide letter No. ರಾಚುಆ. 345.ಇತರೆ.2010, dated 15-12-2010.

By Order and in the name of the Governor of Karnataka,
ASHOK.P. ATRE,
Under Secretary to Government,
DP & AR (Services-4)

P.R. 30

ತೋಟಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕೃತೋಇ 323 ತೋಸೇಪ 2009, ಬೆಂಗಳೂರು, ದಿನಾಂಕ: 21ನೇ ಡಿಸೆಂಬರ್, 2010

ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಹೊಂದಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಕೃತೋಇ 11 ತೋಸೇಪ 2007, ದಿನಾಂಕ : 20-06-2007ರನ್ವಯ ಎರಡು ವರ್ಷ ಪರೀಕ್ಷಾರ್ಥಿ ಅವಧಿಯ ಷರತ್ತಿಗೊಳಪಟ್ಟು ತೋಟಗಾರಿಕೆ ಇಲಾಖೆಯಲ್ಲಿ ಸಹಾಯ ತೋಟಗಾರಿಕೆ ಅಧಿಕಾರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಂಡ ಸಹಾಯಕ ತೋಟಗಾರಿಕೆ ಅಧಿಕಾರಿಗಳು ನಿಗಧಿತ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿರುತ್ತಾರೆ ಮತ್ತು ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆ. ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5(1)(ಎ)ರನ್ವಯ ಇವರುಗಳು ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಈ ಮೂಲಕ ಘೋಷಿಸಲಾಗಿದೆ.

ಕ್ರ. ಸಂ.	ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ	ನೇಮಕಾತಿ ಆದೇಶದಲ್ಲಿನ ಕ್ರಮ ಸಂಖ್ಯೆ	ಸ.ತೋ. ಅಧಿಕಾರಿ ಆಗಿ ಕರ್ತವ್ಯಕ್ಕೆ ಹಾಜರಾದ ದಿನಾಂಕ	2 ವರ್ಷ ಪೂರ್ಣಗೊಳಿಸಿದ ದಿನಾಂಕ
1.	ಅಂಜನ್ ಕುಮಾರ್, ಎಂ. ಸ.ತೋ.ಅ, ತೋಉನಿ (ಜಿಪಂ), ಚಿಕ್ಕಬಳ್ಳಾಪುರ	5	04-07-2007	03-07-2009
2.	ಸಿದ್ದರಾಜು, ಸ.ತೋ.ಅ, ಸತೋನಿ, ಜಅಇ., ರಾಮನಗರ	22	22-06-2007	21-06-2009
3.	ಬಾಳನಗೌಡ ಪಾಟೀಲ್, ಸತೋಅ, ಹಿಸತೋನಿ (ಜಿಪಂ), ಬಾದಾಮಿ	26	03-07-2007	02-07-2009
4.	ನಾಗರಾಜ್ ಎಲ್.ಎಂ., ಸತೋಅ, ಸತೋನಿ (ಜಿಪಂ), ಕೊರಟಗೆರೆ	27	03-07-2007	02-07-2009
5.	ದರ್ಶನ್ ಬಿ.ವಿ, ಸ.ತೋ.ಅ, ಸತೋನಿ. (ಜಿಪಂ), ಮುದ್ದೇಬಿಹಾಳ	34	03-07-2007	02-07-2009
6.	ಬಸವರಾಜ ರಾಚಪ್ಪ ಲಕ್ಕೊಂಡ್, ಸತೋಅ, ಹಿಸತೋನಿ (ಜಿಪಂ), ಬಿಜಾಪುರ	40	03-07-2007	02-07-2009

ಕ್ರ ಸಂ.	ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ	ನೇಮಕಾತಿ ಆದೇಶದಲ್ಲಿನ ಕ್ರಮ ಸಂಖ್ಯೆ	ಸ.ತೋ. ಅಧಿಕಾರಿ ಆಗಿ ಕರ್ತವ್ಯಕ್ಕೆ ಹಾಜರಾದ ದಿನಾಂಕ	2 ವರ್ಷ ಪೂರ್ಣಗೊಳಿಸಿದ ದಿನಾಂಕ
